ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಡಿಸೆಂಬರ್ 29, 2021

ಸಂಪುಟ : 48 ಸಂಚಿಕೆ : 228 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಮಕ್ಕಳ ಕಲಿಕಾ ಕೇಂದ್ರದಲ್ಲೇ ಕೊರೊನಾ ಲಸಿಕೆ: ಸಿಎಂ

ಬೆಂಗಳೂರು, ಡಿ. 28 - ಹದಿನೈದರಿಂದ ಹದಿನೆಂಟು ವರ್ಷದವರೆಗಿನ ಮಕ್ಕಳಿಗೆ ಶಾಲಾ-ಕಾಲೇಜುಗಳಲ್ಲಿ ಕೋವಿಡ್ ಲಸಿಕೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಹುಬ್ಬಳ್ಳಿಗೆ ಪ್ರಯಾಣಿಸುವ ಮುನ್ನ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಜನವರಿ 3 ರಿಂದ ರಾಜ್ಯಾದ್ಯಂತ ಈ ವಯೋಮಿತಿಯ ಮಕ್ಕಳಿಗೆ ಲಸಿಕೆ ಕೊಡಲಾಗುವುದು. ಮಕ್ಕಳ ಆರೋಗ್ಯ ನಮಗೆ ಮುಖ್ಯ. ಈ ಕಾರಣಕ್ಕಾಗಿ ಅವರ ಕಲಿಕಾ ಕೇಂದ್ರಗಳಲ್ಲೇ ಲಸಿಕೆ ನೀಡಲಾಗುವುದು. ಈ ವಯೋಮಿತಿಯ ಮಕ್ಕಳಿಗೆ ಲಸಿಕೆ ನೀಡುವುದಾಗಿ ಕೇಂದ್ರ ಸರ್ಕಾರ ಈಗಾಗಲೇ ಪ್ರಕಟಿಸಿದೆ ಎಂದವರು ಹೇಳಿದ್ದಾರೆ.

ಮಕ್ಕಳಿಗೆ ಕೊವ್ಯಾಕ್ಸಿನ್ ಲಸಿಕೆ ಮೊದಲ ಹಂತದಲ್ಲಿ ನೀಡಲು ತೀರ್ಮಾನಿಸಲಾಗಿದೆ. ನಮ್ಮಲ್ಲಿ ಈ ಲಸಿಕೆ ಸಾಕಷ್ಟು ಸಂಗ್ರಹವಿದ್ದು, ಮುಂದಿನ ದಿನಗಳಲ್ಲಿ ನಮ್ಮ ಬೇಡಿಕೆಯನ್ನು ಈಡೇರಿಸುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸುತ್ತೇವೆ. ಆರೋಗ್ಯದ ದೃಷ್ಟಿಯಿಂದ ಅಂಜದೆ ಮಕ್ಕಳು ಲಸಿಕೆ ಪಡೆದುಕೊಳ್ಳಬೇಕು. 60 ವರ್ಷ ಮೇಲ್ಪಟ್ಟವರಿಗೆ ಅವರ ಮನೆಗೆ ತೆರಳಿ ಬೂಸ್ಟರ್ ಡೋಸ್ ನೀಡಲಾಗುವುದು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ಈ ವಯೋಮಾನದ ವೃದ್ಧರಿಗೆ ಲಸಿಕೆ ನೀಡಲು ತೀರ್ಮಾನಿಸಲಾಗಿದೆ. ಇದುವರೆಗೂ ಮೊದಲನೇ (2ನೇ ಪುಟಕ್ಕೆ)

## ನಾಯಕತ್ವ ಬದಲಾವಣೆ ಇಲ್ಲ

**ಬೊಮ್ಮಾಯಿ ಪೂರ್ಣಾವಧಿ ಮುಖ್ಯಮಂತ್ರಿ: ಅರುಣ್ ಸಿಂಗ್**

ಬೆಂಗಳೂರು, ಡಿ. 28 - ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ. ಮುಂಬರುವ ವಿಧಾನ ಸಭಾ ಚುನಾವಣೆ ಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಾರಥ್ಯದಲ್ಲೇ ನಡೆಸಲಾಗುವುದು ಎಂದು ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ಬಿಜೆಪಿ ರಾಜ್ಯ ಘಟಕದ ಕಾರ್ಯಕಾರಿಣಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನಾಯಕತ್ವ ಬದಲಾವಣೆಯ ಬಗ್ಗೆ ಯಾರು ತಲೆ ಕೆಡಿಸಿಕೊಳ್ಳಬೇಡಿ. ಬೊಮ್ಮಾಯಿ ಅವರೇ ಪೂರ್ಣ ಅವಧಿ ಮುಖ್ಯಮಂತ್ರಿ ಎಂದು ಹೇಳಿದ್ದಾರೆ. ಪ್ರತಿ ಪಕ್ಷಗಳು ಮತ್ತು ವಿರೋಧಿಗಳ ಮಾತಿಗೆ ಯಾರು ಕಿವಿಕೊಡಬೇಡಿ. (2ನೇ ಪುಟಕ್ಕೆ)

# ಬರವಣಿಗೆ, ಉಚ್ಚಾರಣೆ ಸಾಂಗತ್ಯದ ಅದ್ಭುತ ಭಾಷೆ ಕನ್ನಡ




ದಾವಣಗೆರೆ, ಡಿ.28- ಜಗತ್ತಿನಲ್ಲಿಯೇ ಬರವಣಿಗೆ ಮತ್ತು ಉಚ್ಚಾರಣೆ ನಡುವೆ ಸಾಂಗತ್ಯವಿರುವ ಅದ್ಭುತವಾದ ಭಾಷೆ ಕನ್ನಡ. ಪ್ರಪಂಚದ 30 ಶ್ರೇಷ್ಠ ಭಾಷೆಗಳಲ್ಲಿ ಕನ್ನಡವೂ ಒಂದು. ಆದರೆ ಹೇಳಿಕೊಳ್ಳುವ ತಾಕತ್ತನ್ನು ಕನ್ನಡಿಗರು ಪ್ರದರ್ಶಿಸುತ್ತಿಲ್ಲ ಎಂದು ಹೆಸರಾಂತ ವಾಗ್ಮಿ ಮೈಸೂರಿನ ಪ್ರೊ. ಕೃಷ್ಣೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಸ್ಥಳೀಯ ಮಹಾನಗರ ಪಾಲಿಕೆ ಆವರಣದಲ್ಲಿರುವ ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ಮಹಾನಗರ ಪಾಲಿಕೆ, ಕನ್ನಡ ಪರ ಸಂಘ-ಸಂಸ್ಥೆಗಳು ಹಾಗೂ ಪತ್ರಕರ್ತರ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ 66 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಚನೆ ದೃಷ್ಟಿಯಿಂದ ಕನ್ನಡ ಭಾಷೆ ಅದ್ಭುತವಾದ ಭಾಷೆಯಾಗಿದೆ. ಇದು ಹಾಡು, ಒಗಟು, ಗಾದೆಗಳನ್ನು ಒಳಗೊಂಡಿರುವ ಶ್ರೀಮಂತ ಭಾಷೆಯಾಗಿದೆ ಎಂದು ಅಭಿಮಾನಪೂರ್ವಕವಾಗಿ ನುಡಿದರು.

ಕನ್ನಡ ಸಾಹಿತ್ಯ ಕೂಡ ಯಾವ ಸಾಹಿತ್ಯಕ್ಕೂ ಕಡಿಮೆ ಇಲ್ಲ. ಕನ್ನಡದ ವರ ನಟ ಡಾ. ರಾಜಕುಮಾರ್ ನಟಿಸಿರುವ ವೈವಿಧ್ಯಮಯ ಪಾತ್ರಗಳನ್ನು ಜಗತ್ತಿನ ಬೇರೆ ಯಾವ ನಟರಿಂದಲೂ ಮಾಡಲು ಸಾಧ್ಯವಿಲ್ಲ. ಕನ್ನಡ ಸಾಹಿತಿಗಳು ಕೂಡ ಯಾವ ಭಾಷೆಯ ಸಾಹಿತಿಗಳಿಗಿಂತ ಕಡಿಮೆಯಿಲ್ಲ. ಕನ್ನಡ ಭಾಷೆಯ ತಾಕತ್ತನ್ನು ಅರ್ಥಮಾಡಿಕೊಳ್ಳಬೇಕೆಂದು ಕರೆ ನೀಡಿದರು.

ಕನ್ನಡ ಭಾಷೆ ಸರ್ವ ಸಮೃದ್ಧ ಭಾಷೆಯಾಗಿದ್ದು, ಹಿಂದಿನ ಪೂರ್ವಿಕರು ಕನ್ನಡವನ್ನು ಬಳುವಳಿಯಾಗಿ ಕೊಟ್ಟಿದ್ದಾರೆ. ಮುಂದಿನ ಪೀಳಿಗೆಗೆ ಉಳಿಸಿ, ಬೆಳೆಸಿಕೊಂಡು ಹೋಗಬೇಕಾದ ಜವಾಬ್ದಾರಿ ಕನ್ನಡಿಗರ ಮೇಲಿದೆ. ಇಲ್ಲದಿದ್ದರೆ ನಮ್ಮ ಪೂರ್ವಿಕರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಕನ್ನಡದ ಪ್ರತಿ ಅಂಗ ಪ್ರಬಲವಾದಾಗ ಮಾತ್ರ ಕನ್ನಡ ಭಾಷೆ ಪ್ರಬಲವಾಗಿ ಬೆಳೆಯಲು ಸಾಧ್ಯ ಎಂದರು.

ಕನ್ನಡ ನಮ್ಮ ಗರ್ಭದಿಂದ ಹೊರಹೊಮ್ಮಿದ ಭಾಷೆಯಾದರೆ, ಇಂಗ್ಲಿಷ್ ಕೇವಲ ಮೆದುಳಿನ ಭಾಷೆಯಾಗಿದೆ. ಕನ್ನಡ ನಾಡಿನ ಎಲ್ಲಾ ಬ್ಯಾಂಕುಗಳು, ಕೈಗಾರಿಕೆಗಳು, ಕನ್ನಡ ಸಿನಿಮಾಗಳು ಮತ್ತು ಕನ್ನಡ ಪತ್ರಿಕೆಗಳನ್ನು ಚನ್ನಾಗಿ (2ನೇ ಪುಟಕ್ಕೆ)

### ದಾವಣಗೆರೆ ಜನಕ್ಕೆ ಗತ್ತು, ತಾಕತ್ತು, ಸ್ವಾಭಿಮಾನ ಇದೆ

ದಾವಣಗೆರೆ ಬದುಕಿಗೆ ಖಾರ ಇದೆ. ಇಲ್ಲಿಯ ಜನರಿಗೆ ಗತ್ತು, ಸ್ವಾಭಿಮಾನ, ತಾಕತ್ತು ಇದೆ ಎಂದು ಹೆಸರಾಂತ ವಾಗ್ಮಿ ಪ್ರೊ. ಕೃಷ್ಣೇಗೌಡ ಮೆಚ್ಚುಗೆಯ ಮಾತುಗಳನ್ನಾಡಿದರು. ಕನ್ನಡ ಭಾಷೆ ನಿರಂತರವಾಗಿ ಉಳಿಯುವಂತಾಗಲಿ, ಶಕ್ತಿಯುತವಾಗಿ ಬೆಳೆಯುವಂತಾಗಲಿ, ಕನ್ನಡ ಭಾಷಾ ಸಮುದಾಯ ಗಟ್ಟಿಗೊಳ್ಳಲಿ ಎಂಬ ಸದಾಶಯ ವ್ಯಕ್ತಪಡಿಸಿದರು.

## ಕೊರೊನಾದಿಂದ ದೆಹಲಿಯಲ್ಲಿ ಶಾಲೆಗಳು ಬಂದ್

**ಶಿಕ್ಷಣ ಸ್ಥಗಿತ ಕ್ರಮಕ್ಕೆ ವ್ಯಾಪಕ ಟೀಕೆ**

ನವದೆಹಲಿ, ಡಿ. 28 – ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಡಿ.ಡಿ.ಎಂ.ಎ. (ದೆಹಲಿ ವಿಕೋಪ ನಿರ್ವಹಣಾ ಪ್ರಾಧಿಕಾರ), ದೆಹಲಿಯಲ್ಲಿ 'ಹಳದಿ ಎಚ್ಚರಿಕೆ' ನೀಡಿರುವ ಹಿನ್ನೆಲೆಯಲ್ಲಿ ಶಾಲಾ - ಕಾಲೇಜು ಹಾಗೂ ತರಬೇತಿ ಸಂಸ್ಥೆಗಳನ್ನು ಮುಚ್ಚಲಾಗಿದೆ.

ಶಾಲೆಗಳನ್ನು ಮುಚ್ಚುವ ಕ್ರಮ ವ್ಯಾಪಕ ಟೀಕೆಗೆ ಕಾರಣವಾಗಿದೆ. ಶಿಕ್ಷಣ ಪರಿಣಿತರು ಕಲಿಕೆಯಲ್ಲಿ ಕುಂಠಿತವಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಸೋಮವಾರ ರಾಜಧಾನಿಯಲ್ಲಿ 331 ಕೊರೊನಾ ಪ್ರಕರಣಗಳು ಕಂಡು ಬಂದಿವೆ. ಓಮಿಕ್ರಾನ್ ರೂಪಾಂತರಿ ಕೊರೊನಾ ಹೆಚ್ಚಳಕ್ಕೆ ಕಾರಣ ಎನ್ನಲಾಗುತ್ತಿದೆ.

ಈ ಹಿಂದೆ ವಾಯು ಮಾಲಿನ್ಯದ ಕಾರಣದಿಂದಾಗಿ ಶಾಲೆಗಳನ್ನು ಬಹುತೇಕ ತಿಂಗಳ ಅವಧಿಗೆ ಮುಚ್ಚಲಾಗಿತ್ತು. ನಂತರ ಡಿಸೆಂಬರ್ 18ರಿಂದ ಆರನೇ ತರಗತಿ ನಂತರದ ತರಗತಿಗಳನ್ನು ಪುನರಾರಂಭಿಸಲಾಗಿತ್ತು.

ಈ ಬಗ್ಗೆ ಹೇಳಿಕೆ (2ನೇ ಪುಟಕ್ಕೆ)

## 60 ವರ್ಷ ಮೀರಿದವರು ಮುನ್ನೆಚ್ಚರಿಕೆ ಡೋಸ್‌ಗೆ ಪ್ರಮಾಣ ಪತ್ರ ನೀಡಬೇಕಿಲ್ಲ

ನವದೆಹಲಿ, ಡಿ. 28 – ಕೊರೊನಾ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆಯಲು 60 ವರ್ಷ ಮೀರಿದವರು ಸಹ ಅಸ್ವಸ್ಥತೆ ಹೊಂದಿರುವ ಬಗ್ಗೆ ಯಾವುದೇ ಪ್ರಮಾಣ ಪತ್ರ ಸಲ್ಲಿಸಬೇಕಿಲ್ಲ ಎಂದು ಕೇಂದ್ರ ಸರ್ಕಾರ ರಾಜ್ಯಗಳಿಗೆ ತಿಳಿಸಿದೆ. ಇಂತಹ ವ್ಯಕ್ತಿಗಳು ಮೂರನೇ ಡೋಸ್, ಇಲ್ಲವೇ ಮುನ್ನೆಚ್ಚರಿಕೆ ಡೋಸ್ ಪಡೆಯುವುದಕ್ಕೆ ಮುಂಚೆ ವೈದ್ಯರ ಸಲಹೆ ಪಡೆದಿರುತ್ತಾರೆ ಎಂಬ ನಿರೀಕ್ಷೆ ಇದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಎರಡನೇ ಡೋಸ್ ಪಡೆದು 9 ತಿಂಗಳು ಅಂದರೆ 39 ವಾರ ಉರುಳಿದವರು ಮುನ್ನೆಚ್ಚರಿಕೆ ಡೋಸ್ ಪಡೆಯಬಹುದು.

# ಬೇಸಿಗೆ ಹಂಗಾಮಿನ ಬೆಳೆಗಳಿಗೆ ಭದ್ರಾ ನೀರು

### 29 ರಿಂದ ಎಡದಂಡೆ, 30 ರಿಂದ ಬಲದಂಡೆ ನಾಲೆಗೆ ನೀರು ಹರಿಸಲು ನಿರ್ಧಾರ

**ಜಿಗಳಿ ಪ್ರಕಾಶ್**

ಶಿವಮೊಗ್ಗ, ಡಿ. 28- ಭದ್ರಾ ಜಲಾಶಯದಿಂದ ಭದ್ರಾ ಅಚ್ಚುಕಟ್ಟಿನ ಬೇಸಿಗೆ ಹಂಗಾಮಿನ ಬೆಳೆಗಳಿಗೆ ಡಿ. 29 ರಿಂದ ಎಡದಂಡೆ ನಾಲೆಗೆ ಮತ್ತು ಡಿ. 30ರಿಂದ ಬಲದಂಡೆ ನಾಲೆಗೆ ನೀರು ಹರಿಸಲು ಮಂಗಳವಾರ ನಡೆದ ಭದ್ರಾ ಕಾಡಾ ಸಭೆ ನಿರ್ಧರಿಸಿತು.

ಮಲವಗೊಪ್ಪದಲ್ಲಿರುವ ಭದ್ರಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಛೇರಿಯ ಸಭಾಂಗಣದಲ್ಲಿ ಪ್ರಾಧಿಕಾರದ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ ಅವರ ಅಧ್ಯಕ್ಷತೆಯಲ್ಲಿ 79ನೇ ಭದ್ರಾ ಯೋಜನಾ ನೀರಾವರಿ ಸಲಹಾ ಸಮಿತಿ ಸಭೆ ನಡೆಯಿತು.

ಸಭೆಯ ಆರಂಭದಲ್ಲಿ ಭದ್ರಾ ಅಧೀಕ್ಷಕ ಅಭಿಯಂತರ ಚಂದ್ರಹಾಸ್ ಅವರು ದಾವಣಗೆರೆ ಮತ್ತು ಮಲೇಬೆನ್ನೂರು ವಿಭಾಗದಲ್ಲಿ ನಾಲೆ ಸೇತುವೆ ಕಾಮಗಾರಿಗಳು ನಡೆಯುತ್ತಿರುವುದರಿಂದ ಜನವರಿ 6ರ ನಂತರ ನೀರು ಹರಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಂತೆಯೇ ರೈತ ಸಂಘದ ಹೆಚ್.ಆರ್. ಬಸವರಾಜಪ್ಪ ಅವರು ಗರಂ ಆಗಿ ನೀವು ಹೇಳಿದಂತೆ ಕೇಳಲು ನಾವು ಇಲ್ಲಿಗೆ ಬಂದಿಲ್ಲ. ನೀರು ಹರಿಸುವ ತೀರ್ಮಾನ ಕಾಡಾ ಸಮಿತಿಗೆ ಸೇರಿದ್ದು, (3ನೇ ಪುಟಕ್ಕೆ)




### ದೇವರಬೆಳೆಕರೆ ಪಿಕಪ್‌ನ ಗೇಟ್ ಕೂಡಲೇ ಬದಲಿಸಿ

ದೇವರಬೆಳೆಕೆರೆ ಪಿಕಪ್ ಜಲಾಶಯದ ಗೇಟ್ ಬಳಿ ಸಸ್ಯ ಜಲರಾಶಿ ನಿಂತಿರುವುದರಿಂದ ಹೆಚ್ಚುವರಿ ನೀರು ಹೊರಗೆ ಹೋಗುತ್ತಿಲ್ಲ. ಇದರಿಂದಾಗಿ ಹಿನ್ನೀರು ಹೆಚ್ಚಾಗಿ ಹತ್ತಾರು ಹಳ್ಳಿಗಳ ಸಾವಿರಾರು ಎಕರೆ ಬೆಳೆಗೆ ಹಾನಿಯಾಗಿದೆ ಎಂದು ಸಂಕ್ಲೀಪುರ, ದೇವರಬೆಳಕೆರೆ, ಗುಳದಹಳ್ಳಿ ರೈತರು ಕಾಡಾ ಸಭೆಯ ಗಮನ ಸೆಳೆದಾಗ ವೈ. ದ್ಯಾವಪ್ಪ ರೆಡ್ಡಿ, ಗೋವಿಹಾಳ್ ರಾಜಣ್ಣ, ತೇಜಸ್ವಿ ಪಟೇಲ್ ಧ್ವನಿಗೂಡಿಸಿದರು.

ಪಿಕಪ್ ಗೇಟ್‌ಗೆ ಅಳವಡಿಸಿರುವ ಸ್ವಯಂ ಚಾಲಿತ ಗೇಟ್‌ಗಳನ್ನು ತೆರವುಗೊಳಿಸಿ ಮಾನವ ಚಾಲಿತ ಗೇಟ್ ಅಳವಡಿಸಿದರೆ ಮಾತ್ರ ಸಮಸ್ಯೆ ಬಗೆಹರಿಯುತ್ತದೆ ಎಂದು ದ್ಯಾವಪ್ಪ ರೆಡ್ಡಿ ಹೇಳಿದಾಗ, ಎಇಇ ಸಂತೋಷ್ ಅವರು ಈ ಬಗ್ಗೆ ಯೋಜನೆ ಸಿದ್ದಪಡಿಸಿ, ಭದ್ರಾ ಎಸ್‌ಇ ಅವರಿಗೆ ಸಲ್ಲಿಸಿದ್ದೇವೆ. ತಾಂತ್ರಿಕ ಸಲಹಾ ಸಮಿತಿಯವರು ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ ಎಂಬ ವಿಷಯವನ್ನು ಸಭೆಗೆ ತಿಳಿಸಿದರು. ಆಗ ಪವಿತ್ರ ರಾಮಯ್ಯ ಅವರು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಬೇಕೆಂದರು.

# ಬಸಾಪುರದಲ್ಲಿ ಮಹೇಶ್ವರ ಜಾತ್ರೆ ಸಂಭ್ರಮ

### ಮಹೇಶ್ವರನ ಪೂಜೆಯೊಂದಿಗೆ ಅನ್ನ, ಹಾಲು, ಬೆಲ್ಲದ ಪ್ರಸಾದ ಸೇವಿಸಿದ ಗ್ರಾಮಸ್ಥರು

ದಾವಣಗೆರೆ, ಡಿ.28 - ಜಿಲ್ಲಾದ್ಯಂತ ಗ್ರಾಮಗಳಲ್ಲಿ ಮಹೇಶ್ವರ ಜಾತ್ರೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಮಹೇಶ್ವರನನ್ನು ಪೂಜಿಸಿದ ಜನತೆ, ಪ್ರಸಾದವಾಗಿ ಅನ್ನ, ಹಾಲು, ಪುಡಿ ಬೆಲ್ಲ, ಬಾಳೆ ಹಣ್ಣು ಬೆರೆಸಿ ಸೇವಿಸಿದರು.

ದಸರಾ, ದೀಪಾವಳಿ, ಯುಗಾದಿ ಮುಂತಾದ ಹಬ್ಬಗಳನ್ನು ಮನೆಗಳಲ್ಲಿ ಮನೆಯವರೊಂದಿಗೆ ಮಾಡಿದರೆ, ಮಹೇಶ್ವರ ಜಾತ್ರೆಯನ್ನು ಊರ ಹೊರ ಭಾಗದ ದೇವ ಸ್ಥಾನದ ಆವರಣ ಅಥವಾ ತೋಟದಲ್ಲಿ ಮಾಡಲಾಗುತ್ತದೆ.

ಹಬ್ಬಕ್ಕಾಗಿ ಗ್ರಾಮಸ್ಥರು ಒಂದೆರಡು ದಿನಗಳ ಮೊದಲೇ ಹಬ್ಬ ಆಚರಿಸುವ ಸ್ಥಳವನ್ನು ಶುದ್ಧಗೊಳಿಸಿ, ಮಹೇಶ್ವರನ ಗದ್ದುಗೆ ಸ್ಥಾಪಿಸಿ ತಯಾರಿಯಲ್ಲಿ ಪಾಲ್ಗೊಂಡಿದ್ದರು. ಮಂಗಳವಾರ ಚಿಕ್ಕ ಮಕ್ಕಳು, ಯುವಕರು ಇಳಿ ವಯಸ್ಸಿನ ಹಿರಿಯರು ಉತ್ಸಾಹದಿಂದ ಪಾಲ್ಗೊಂಡಿದ್ದರು.

**ಬಸಾಪುರದಲ್ಲಿ ಸಂಭ್ರಮ:** ದಾವಣಗೆರೆ ನಗರಕ್ಕೆ ಸಮೀಪದ ಬಸಾಪುರದಲ್ಲಿ ನಡೆಯುವ ಮಹೇಶ್ವರ ಜಾತ್ರೆ ಹೆಚ್ಚು ಪ್ರಸಿದ್ಧಿ. ದಾವಣಗೆರೆ ನಗರ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳ (2ನೇ ಪುಟಕ್ಕೆ)





ಬಸಾಪುರದಲ್ಲಿ ಶ್ರೀ ಮಹೇಶ್ವರ ಜಾತ್ರಾ ಸ್ಥಳಕ್ಕೆ ಆಗಮಿಸಿದ್ದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರು ಪ್ರಸಾದ ಸೇವಿಸಿದರು. ಈ ಸಂದರ್ಭದಲ್ಲಿ ಉದ್ಯಮಿ ಎಸ್.ಎಸ್. ಗಣೇಶ್, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.



ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಕಾರ್ತಿಕ ದೀಪೋತ್ಸವ ಮಂಗಳವಾರ ಸಂಜೆ ವಿಜೃಂಭಣೆಯಿಂದ ನಡೆಯಿತು

## ಕೊವೊವ್ಯಾಕ್ಸ್, ಕೊರ್ಬೊವ್ಯಾಕ್ಸ್ ಲಸಿಕೆ, ಮೊಲ್ನುಪಿರಾವಿರ್ ಔಷಧಿಗೆ ಸಮ್ಮತಿ

ನವದೆಹಲಿ, ಡಿ. 28 - ಭಾರತದಲ್ಲಿ ಲಭ್ಯವಾಗುವ ಕೊರೊನಾ ಲಸಿಕೆಗಳ ಸಂಖ್ಯೆಯನ್ನು ವಿಸ್ತರಿಸಿರುವ ಕೇಂದ್ರ ಸರ್ಕಾರ, ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.)ನ ಕೊವೊವ್ಯಾಕ್ಸ್, ಬಯಾಲಜಿಕಲ್ ಇ ಲಸಿಕೆಯಾದ ಕೊರ್ಬೊವ್ಯಾಕ್ಸ್ ಹಾಗೂ ಕೊರೊನಾ ನಿವಾರಿಸುವ ಗುಳಿಗೆಯಾದ ಮೊಲ್ನುಪಿರಾವಿರ್‌ಗಳಿಗೆ ತುರ್ತು ಬಳಕೆಯ ಒಪ್ಪಿಗೆ ನೀಡಲಾಗಿದೆ. ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಮಂಗಳವಾರ ಲಸಿಕೆಗೆ ಒಪ್ಪಿಗೆ ನೀಡಿರುವ ಬಗ್ಗೆ ತಿಳಿಸಿದ್ದಾರೆ. ಕೊವೊವ್ಯಾಕ್ಸ್ ಹಾಗೂ ಕೊರ್ಬಿವ್ಯಾಕ್ಸ್ ಲಸಿಕೆಗಳಿಗೆ ಈ ಹಿಂದೆ ಸಿ.ಡಿ.ಎಸ್.ಸಿ.ಒ. ತುರ್ತು ಬಳಕೆಗಾಗಿ ಒಪ್ಪಿಗೆ ನೀಡಿತ್ತು.

ಮೊಲ್ನುಪಿರಾವಿರ್ ಗುಳಿಗೆಯನ್ನು ವಯಸ್ಕರಿಗೆ ನೀಡಲು ನಿರ್ಬಂಧಿತ ಅನುಮತಿ ನೀಡಲಾಗಿದೆ. ರೋಗ ಉಲ್ಬಣವಾಗುವ ವರ್ಗದವರಿಗೆ ಈ ಗುಳಿಗೆಗಳನ್ನು ನೀಡಲಾಗುವುದು.

ಇದರೊಂದಿಗೆ ದೇಶದಲ್ಲಿ ತುರ್ತು ಬಳಕೆಗಾಗಿ ಒಪ್ಪಿಗೆ ಪಡೆದಿರುವ ಲಸಿಕೆಗಳ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ. ಕೊವಿಶೀಲ್ಡ್, ಕೊವ್ಯಾಕ್ಸಿನ್, ಜೈಕೊವ್ - ಡಿ, ಸ್ಪುಟ್ನಿಕ್ ವಿ ಹಾಗೂ ಮೊಡೆರ್ನಾ ಮತ್ತು ಜಾನ್ಸನ್ ಅಂಡ್ ಜಾನ್ಸನ್ ಲಸಿಕೆಗಳಿಗೆ (2ನೇ ಪುಟಕ್ಕೆ)

## ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಬಸ್ ಹರಿದು ಪಾದಚಾರಿ ಸಾವು

ದಾವಣಗೆರೆ, ಡಿ.28- ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ಪಾದಚಾರಿ ಮೇಲೆ ಸ್ಟೀಲ್ ಕಂಪನಿಯ ಬಸ್ ಹರಿದ ಪರಿಣಾಮ ಆತ ಸ್ಥಳದಲ್ಲೇ ಧಾರುಣವಾಗಿ ಸಾವಿಗೀಡಾಗಿರುವ ಘಟನೆ ನಗರದ ವೀರ ರಾಣಿ ಕಿತ್ತೂರು ಚನ್ನಮ್ಮ (ಅರುಣ ಸರ್ಕಲ್) ವೃತ್ತದಲ್ಲಿ ಇಂದು ರಾತ್ರಿ ಸಂಭವಿಸಿದೆ.

ಎಸ್ ಪಿಎಸ್ ನಗರದ ಡಾ. ರಾಜಕುಮಾರ್ ಶಾಲೆಯ ಸಮೀಪದ ವಾಸಿ, ಬಾರ್ ಕೆಲಸಗಾರ ಬಸಪ್ಪ (60) ಮೃತ ದುರ್ದೈವಿ.

ಪ್ರತಿ ದಿನದಂತೆ ಇಂದೂ ಸಹ ಕೆಲಸ ಮುಗಿಸಿಕೊಂಡು ಅರುಣ ಚಿತ್ರ ಮಂದಿರ ಎದುರಿನ ಹಳೆ ಪಿ.ಬಿ. ರಸ್ತೆ ದಾಟಿ ಮನೆ ಕಡೆಗೆ ನಡೆದುಕೊಂಡು ಹೊರಟಿದ್ದ ಬಸಪ್ಪನಿಗೆ ಹೈಸ್ಕೂಲ್ ಮೈದಾನದ ಕಡೆಯಿಂದ ಬಂದು ಕಿತ್ತೂರು ಚನ್ನಮ್ಮ ವೃತ್ತದಲ್ಲಿ ಕಂಪನಿ ಕೆಲಸಗಾರರನ್ನು ಇಳಿಸಿದ ಬಸ್ ಅದೇ ವೃತ್ತದಲ್ಲಿ ರೇಣುಕಾ ಮಂದಿರ ಕಡೆಗೆ ಯು ಟರ್ನ್ ತೆಗೆದುಕೊಳ್ಳುವಾಗ ಡಿಕ್ಕಿ ಹೊಡೆದಿದೆ. ಬಸಪ್ಪ ಕೆಳಗೆ ಬಿದ್ದಿದ್ದಾರೆ. ಇತ್ತ ಕೆಳಗೆ ಬಿದ್ದಿದ್ದ ಬಸಪ್ಪ ಮೇಲೇಳುವಷ್ಟರಲ್ಲಿ ಚಕ್ರಗಳು ತಲೆ ಮೇಲೆ ಹರಿದು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಈ ಸಂಬಂಧ ದಕ್ಷಿಣ ಸಂಚಾರ ಪೊಲೀಸ್ ಠಾಣೆ (2ನೇ ಪುಟಕ್ಕೆ)


ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಮಹಾನಗರ ಪಾಲಿಕೆಯಿಂದ 66ನೇ ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿಗೆ ಭಾಜನರಾಗಿರುವ ರೈತರ ಆಶಾಕಿರಣ, ತೋಟಗಾರಿಕೆ ಬಗ್ಗೆ ಗಣನೀಯ ಸೇವೆ ಸಲ್ಲಿಸಿದ ಸಾಧಕರೂ, ತರಳಬಾಳು ಕೃಷಿ ಕೇಂದ್ರದ ವಿಜ್ಞಾನಿಗಳೂ, ಸರಳ ಸಜ್ಜನಿಕೆಯ ವ್ಯಕ್ತಿತ್ವವುಳ್ಳವರೂ ಆದ

ಶ್ರೀ ಎಂ.ಜಿ. ಬಸವನಗೌಡ್ರು

ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.



ಟಿ. ಗಣೇಶ್ ದಾಸಕರಿಯಪ್ಪ
ದಾವಣಗೆರೆ ಜಿಲ್ಲಾ ಜೆಡಿಎಸ್ ಕಾರ್ಯದರ್ಶಿ


## 'ಇ-ರುಪಿ' ಮೂಲಕ ವಿದ್ಯಾರ್ಥಿ ವೇತನ ಪಾವತಿ

ಬೆಂಗಳೂರು, ಡಿ. 28 – ವಿದ್ಯಾರ್ಥಿ ವೇತನವನ್ನು ನಗದು ರಹಿತವಾಗಿ 'ಇ-ರುಪಿ' ಮೂಲಕ ಪಾವತಿಸಲು ರಾಜ್ಯ ಸರ್ಕಾರದ ಇ-ಆಡಳಿತ ಇಲಾಖೆ ವ್ಯವಸ್ಥೆ ರೂಪಿಸಿದೆ. ಇದಕ್ಕಾಗಿ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಹಾಗೂ ಎಸ್.ಬಿ.ಐ. ಬ್ಯಾಂಕುಗಳ ಜೊತೆ ಕೈ ಜೋಡಿಸಲಾಗಿದೆ.

ಇ-ರುಪಿ ಮೂಲಕ ಸೋರಿಕೆ ರಹಿತವಾಗಿ ಶಿಕ್ಷಣ ಶುಲ್ಕ ಪಾವತಿಸಲು ಸಾಧ್ಯವಾಗಲಿದೆ. ಕಾಲೇಜು, ಇಲ್ಲವೇ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಹಣ ಪಾವತಿ ಮಾಡಲು ಈ ವ್ಯವಸ್ಥೆ ಬಳಸಲಾಗುವುದು.

ಈ ವ್ಯವಸ್ಥೆಯ ಅನ್ವಯ ರಾಜ್ಯ ಸರ್ಕಾರ ಅರ್ಹ ವಿದ್ಯಾರ್ಥಿಗಳ ಮೊಬೈಲ್‌ಗಳಿಗೆ ಇ - ವೋ ಚ ರ್ ಗ ಳ ನ್ನು (2ನೇ ಪುಟಕ್ಕೆ)

## ಬಸಾಪುರದಲ್ಲಿ ಮಹೇಶ್ವರ ಜಾತ್ರೆ ಸಂಭ್ರಮ

**(1ನೇ ಪುಟದಿಂದ)** ಜನರು ಇಲ್ಲಿನ ಹಬ್ಬಕ್ಕೆ ಬಂದು ಪ್ರಸಾದ ಸೇವಿಸಿ ಸಂಭ್ರಮಿಸುತ್ತಾರೆ. ಕಳೆದ ವರ್ಷ ಕೊರೊನಾ ಹಿನ್ನೆಲೆಯಲ್ಲಿ ಬಸಾಪುರದ ಜಾತ್ರೆ ಕಳೆಗುಂದಿತ್ತು. ಎರಡು ದಿನಗಳ ಕಾಲ ನಡೆಯುವ ಹಬ್ಬವನ್ನು ಒಂದೇ ದಿನದಲ್ಲಿ ಸರಳವಾಗಿ ಆಚರಿಸಲಾಗಿತ್ತು. ಬರುವ ಭಕ್ತರ ಸಂಖ್ಯೆಯೂ ಕಡಿಮೆಯಾಗಿತ್ತು. ಆದರೆ, ಇಂದು ವೈಭವ ಮರುಕಳಿಸಿತ್ತು. ಸಾವಿರಾರು ಸಂಖ್ಯೆಯ ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಿದರು.

ಪ್ರತಿ ವರ್ಷದಿಂದ ಈ ವರ್ಷವು ಮುಂಜಾನೆ ಹಬ್ಬದ ಸಂಪ್ರದಾಯಗಳು ನಡೆದವು. ಮಹೇಶ್ವರ ಸ್ವಾಮಿಯ ಗದ್ದುಗೆ ಸಮೀಪ ಇರುವ ಪುಷ್ಕರಣಿಯಲ್ಲಿ ಸ್ವಾಮೀಜಿ ಒಬ್ಬರು ಮುಳುಗಿ ಮೃತ್ತುಕೆಯನ್ನು ತಂದರು. ಅದನ್ನು 2 ಬಾಳೆ ಹಣ್ಣಿನ ಚಿಪ್ಪಿನಲ್ಲಿಟ್ಟು ಪೂಜಿಸಲಾಯಿತು. ನಂತರ ಎರಡೂ ಬಾಳೆ ಹಣ್ಣಿನ ಚಿಪ್ಪುಗಳನ್ನು ಪುಷ್ಕರಣಿಗೆ ವಿಸರ್ಜಿಸಲಾಯಿತು. ಎರಡೂ ಚಿಪ್ಪುಗಳು ತೇಲಿದ್ದರಿಂದ ಗ್ರಾಮಸ್ಥರ ಸಂಭ್ರಮ ಇಮ್ಮಡಿಯಾಯಿತು.

ವಿಸರ್ಜಿಸಿದ ಎರಡೂ ಚಿಪ್ಪುಗಳು ಮುಳುಗಿದರೆ ಗಂಡಾಂತರವೆಂದೂ, ಎರಡೂ ತೇಲಿದರೆ ತುಂಬಾ ಒಳ್ಳೆಯದೆಂದೂ, ಒಂದು ತೇಲಿ ಒಂದು ಮುಳುಗಿದರೆ ಸಾಧಾರಣ ಫಲ ಎಂಬುದು ಇಲ್ಲಿನ ಗ್ರಾಮಸ್ಥರ ನಂಬಿಕೆಯಾಗಿದೆ.

ಮಹೇಶ್ವರ ಗದ್ದುಗೆ ಬಳಿ ಆನೆಕೊಂಡದ ಬಸವೇಶ್ವರ ಸ್ವಾಮಿ, ಬಸಾಪುರದ ಗುರುಸಿದ್ದೇಶ್ವರ ಸ್ವಾಮಿ ಹಾಗೂ ಹಾಲಸ್ವಾಮಿ ದೇವರುಗಳ ಸಮಾಗಮವಾಗಿತ್ತು. ಜೊತೆಗೆ ಆನೆಕೊಂಡದ ಬಸವೇಶ್ವರ ಸ್ವಾಮಿಯನ್ನು ಮೆರವಣಿಗೆ ಮೂಲಕ ಕರೆ ತರಲಾಯಿತು. ನಂತರ ಒಲೆ ಹಚ್ಚಿ ಪ್ರಸಾದ ತಯಾರಿಸಲಾಯಿತು.

# ದೇಶಕ್ಕೆ ಕಾಂಗ್ರೆಸ್ ಕೊಡುಗೆ ಅಪಾರ




### ಜಗಳೂರಿನ ಮಾಜಿ ಶಾಸಕ ಹೆಚ್.ಪಿ.ರಾಜೇಶ್

ಜಗಳೂರು, ಡಿ.28- ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷದ ಕೊಡುಗೆ ಅಪಾರ ಎಂದು ಮಾಜಿ ಶಾಸಕ ಎಚ್. ಪಿ.ರಾಜೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಕಾಂಗ್ರೆಸ್ ಕಛೇರಿಯಲ್ಲಿ ಇಂದು ಹಮ್ಮಿಕೊಂಡಿದ್ದ ಕಾಂಗ್ರೆಸ್ ಪಕ್ಷದ ಸಂಸ್ಥಾಪನಾ ದಿನಾಚರಣೆ ಹಾಗೂ ಆನ್‌ಲೈನ್ ಸದಸ್ಯತ್ವ ಅಭಿಯಾನ ಮತ್ತು ಮೇಕೆದಾಟು ಜಲಾಶಯ ನಿರ್ಮಾಣ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮೇಕೆದಾಟು ಜಲಾಶಯ ನಿರ್ಮಾಣ ಪಾದಯಾತ್ರೆಗೆ ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲು ಕರೆ ನೀಡಿದರು.

ಕೆಪಿಸಿಸಿ ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಕೆಪಿಸಿಸಿ ವರಿಷ್ಠರ ಸಲಹೆಯಂತೆ ಆನ್‌ಲೈನ್ ಸದಸ್ಯತ್ವ ನೋಂದಣಿ ಅಭಿಯಾನ ಹಮ್ಮಿಕೊಂಡಿದ್ದು, ಶೀಘ್ರದಲ್ಲಿ ಪ್ರತಿ ಬೂತ್ ಮಟ್ಟಕ್ಕೆ ನೋಂದಣಿಗಾರರನ್ನು ನೇಮಿಸಲು ಕುರಿತು ಮಾಹಿತಿ ನೀಡಿದರು.

ಕೆಪಿಸಿಸಿ ಎಸ್‌ಟಿ ಘಟಕದ ಕೆ.ಪಿ. ಪಾಲಯ್ಯ ಮಾತನಾಡಿ, ಕಾಂಗ್ರೆಸ್ ಪಕ್ಷದ ಸಂಘಟನೆ ಬಲವರ್ಧನೆಗೊಳಿಸಿ, ಮುಂಬರುವ ಚುನಾವಣೆಗಳಲ್ಲಿ ಆಡಳಿತ ಬಿಜೆಪಿ ಪಕ್ಷಕ್ಕೆ ತಕ್ಕ ಉತ್ತರ ನೀಡಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಜಿ.ಪಂ. ಮಾಜಿ ಅಧ್ಯಕ್ಷೆ ನಾಗರತ್ನಮ್ಮ, ಮುಖಂಡರಾದ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಬಿ.ಲೋಕೇಶ್, ತಿಪ್ಪೇಸ್ವಾಮಿ, ಯು.ಜಿ. ಶಿವಕುಮಾರ್, ಕುಬೇಂದ್ರಪ್ಪ, ಸಿ. ತಿಪ್ಪೇಸ್ವಾಮಿ, ಅಹಮ್ಮದ್ ಅಲಿ, ಪಪಂ ಸದಸ್ಯರಾದ ರವಿಕುಮಾರ್, ರಮೇಶ್, ಶಕೀಲ್ ಅಹ್ಮದ್, ಮಹಿಳಾ ಘಟಕದ ಸಾವಿತ್ರಮ್ಮ, ಹನುಮಕ್ಕ, ಯುವ ಕಾಂಗ್ರೆಸ್ ಅಧ್ಯಕ್ಷ ತಿಪ್ಪೇಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

## ನಾಯಕತ್ವ ಬದಲಾವಣೆ ಇಲ್ಲ

**(1ನೇ ಪುಟದಿಂದ)** ಸರ್ಕಾರ ಮತ್ತು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಲು ಮತ್ತು ಮುಜುಗರ ಉಂಟು ಮಾಡಲು ಇಂತಹ ಕುತಂತ್ರಗಳು ನಡೆಯುತ್ತಿವೆ.

ವಿರೋಧಿಗಳನ್ನು ರಾಜಕೀಯವಾಗಿ ಮಣಿಸಿ, ಅದು ಬಿಟ್ಟು ಅವರ ಮಾತಿಗೆ ಕಿವಿಕೊಡಬೇಡಿ. ವಿಧಾನಸಭಾ ಚುನಾವಣೆ ಸಮೀಪದಲ್ಲಿದೆ. ನಾವು ಅತ್ತಕಡೆ ದಿಕ್ಕು ಹರಿಸಿ, ಪಕ್ಷವನ್ನು ಸಂಘಟಿಸಬೇಕು ಎಂದವರು ತಿಳಿಸಿ ದ್ದಾರೆ. ಕರ್ನಾಟಕದ ಆಡಳಿತ ಮತ್ತು ಪಕ್ಷ ಸಂಘಟನೆಗೆ ಎಲ್ಲ ಮಾಹಿತಿ ಲಭ್ಯ ವಿದೆ. ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗಳಿಗೆ ನಮ್ಮವರೇ ಮುಳುವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಪಕ್ಷ ವಿರೋಧಿ ಚಟುವಟಿಕೆ ಮಾಡಿದವರಿಗೆ ನಮ್ಮಲ್ಲಿ ತಕ್ಕ ಶಾಸ್ತಿಯಾಗುತ್ತದೆ. ಯಾವುದೇ ಒಬ್ಬ ವ್ಯಕ್ತಿಯಿಂದ ಪಕ್ಷವಿಲ್ಲ. ಒಳಗೇ ಇದ್ದುಕೊಂಡು ಪಕ್ಷದ ಬೆನ್ನಿಗೆ ಇರಿಯುವವರಿಗೆ ಮುಂದೆ ದೊಡ್ಡ ಶಿಕ್ಷೆ ಕಾದಿದೆ ಎಂದು ಎಚ್ಚರಿಕೆ ನೀಡಿದರು.

ಯಡಿಯೂರಪ್ಪ ಮತ್ತು ಬೊಮ್ಮಾಯಿ ನಾಯಕತ್ವಕ್ಕೆ ನೀವು ಬೆಂಬಲ ನೀಡಿ, ಸರ್ಕಾರದ ವಿರುದ್ಧ ಆರೋಪ ಮತ್ತು ಅಪಪ್ರಚಾರ ನಡೆಸುತ್ತಿರುವ ಕಾಂಗ್ರೆಸ್ ನಾಯಕರಿಗೆ ಒಗ್ಗಟಾಗಿ ಉತ್ತರ ನೀಡಲು ಗಮನಹರಿಸಿ.

ವಿಧಾನಸಭಾ ಚುನಾವಣೆ ಇನ್ನೊಂದು ವರ್ಷ ಮಾತ್ರ ಬಾಕಿ ಇದೆ. ಇಂತಹ ಸಂದರ್ಭದಲ್ಲಿ ನಾಯಕತ್ವ ಬದಲಾವಣೆಯಾಗುತ್ತದೆ ಎಂಬ ಊಹಾಪೋಹಾಗಳು ಎದ್ದಿವೆ. ಇದರಿಂದ ಯಾರೇ ಸಮರ್ಥ ನಾಯಕರಾದರೂ, ಅವರ ಮಾನಸಿಕ ಸ್ಥಿತಿ ಹದಗೆಡುತ್ತದೆ. ಹಾಗಾಗಿ ಇಂತಹ ಊಹಾಪೋಹಗಳಿಗೆ ತಲೆ ಕೆಡಿಸಿಕೊಳ್ಳಬೇಡಿ. ಎಲ್ಲರೂ ಬೊಮ್ಮಾಯಿ ಅವರ ಬೆನ್ನಿಗೆ ನಿಂತು ಕೆಲಸ ಮಾಡಿ ಎಂದು ಸಿಂಗ್ ತಾಕೀತು ಮಾಡಿದರು.

## ಸಾಂಗತ್ಯವಿರುವ ಅದ್ಭುತ ಭಾಷೆ ಕನ್ನಡ

**(1ನೇ ಪುಟದಿಂದ)** ಬೆಳೆಸಬೇಕಾಗಿದೆ ಎಂದು ಹೇಳಿದರು.

ಪ್ರಪಂಚದಲ್ಲಿ ಭಾಷೆ ಹೆಸರಿನಲ್ಲಿ ಹಬ್ಬವನ್ನು ಆಚರಿಸುತ್ತಿರುವುದು ಕರ್ನಾಟಕದಲ್ಲಿ ಮಾತ್ರ. ಕನ್ನಡಿಗರೆಲ್ಲರೂ ಸೇರಿ ಕನ್ನಡ ಭಾಷೆಯನ್ನು ಶಕ್ತಿಯುತವಾಗಿ ಬೆಳೆಸಬೇಕೆಂದು ಮನವಿ ಮಾಡಿದರು.

ಮಹಾನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವೀರಪ್ಪ ಎಂ. ಬಾವಿ, ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿದರು.

ಉಪ ಮಹಾಪೌರರಾದ ಶಿಲ್ಪಾ ಜಯಪ್ರಕಾಶ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಬಿ. ಗೋಣೆಪ್ಪ, ತೆರಿಗೆ ನಿರ್ಧರಣೆ, ಹಣಕಾಸು ಮತ್ತು ಮೇಲ್ಮನವಿ ಸ್ಥಾಯಿ ಸಮಿತಿ ಅಧ್ಯಕ್ಷೆ ರೇಣುಕಾ ಶ್ರೀನಿವಾಸ್, ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷೆ ಗೀತಾ ದಿಳ್ಳೆಪ್ಪ, ವಿಪಕ್ಷ ನಾಯಕ ಎ. ನಾಗರಾಜ್, ಆಯುಕ್ತರಾದ ವಿಶ್ವನಾಥ್ ಪಿ. ಮುದಜ್ಜಿ, ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್, ಕನ್ನಡಪರ ಹೋರಾಟಗಾರರಾದ ಟಿ. ಶಿವಕುಮಾರ್, ಕೆ.ಜಿ. ಶಿವಕುಮಾರ್, ಅಬ್ದುಲ್ ಲತೀಫ್, ನಾಗೇಂದ್ರ ಬಂಡೀಕರ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀಮತಿ ರುದ್ರಾಕ್ಷಿಬಾಯಿ ಹಾಗೂ ಸಿದ್ಧಗಂಗಾ ಶಾಲಾ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಕೆ.ಎಂ. ವೀರೇಶ್ ಪೈಲ್ವಾನ್ ಹಾಗೂ ರಾಕೇಶ್ ಜಾಧವ್ ನಿರೂ ಪಿಸಿದರು. ಉಮಾ ಪ್ರಕಾಶ್, ಆಶಾ ಉಮಾಶಂಕರ್ ಸ್ವಾಗತಿಸಿದರು. ಸ್ವಾಗಿ ಶಾಂತಕುಮಾರ್ ವಂದಿಸಿದರು.

ಜಿಲ್ಲಾ ವಾದ್ಯವೃಂದ ಕಲಾವಿದರ ಸಂಘದವರಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಇದೇ ಸಂದರ್ಭದಲ್ಲಿ ಪತ್ರಕರ್ತರಾದ ಜನತಾವಾಣಿ ವರದಿಗಾರ ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ, ಪ್ರಜಾವಾಣಿ ಸ್ಥಾನಿಕ ಸಂಪಾದಕ ವಿಶಾಖ್, ಪಬ್ಲಿಕ್ ಟಿವಿ ವರದಿಗಾರ ಪುನೀತ್ ಅಪ್ತಿ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

## ಬಿಗಿ ಭದ್ರತೆಯಲ್ಲಿ ಮತ ಯಂತ್ರಗಳು : ನಾಳೆ ಫಲಿತಾಂಶ


ಹರಿಹರ

ಹರಿಹರ, ಡಿ. 28 - ತಾಲ್ಲೂಕಿನ ಮಲೇಬೆನ್ನೂರು ಪುರಸಭೆ ಮತ್ತು ನಗರದ ಹೈಸ್ಕೂಲ್ ಬಡಾವಣೆಯ 21 ನೇ ವಾರ್ಡಿನಲ್ಲಿ ನಡೆದ ಚುನಾವಣೆಗಳ ಮತ ಯಂತ್ರಗಳನ್ನು ಜಿ.ಬಿ.ಎಂ.ಎಸ್. ಪ್ರೌಢಶಾಲಾ ಕೊಠಡಿಯಲ್ಲಿ ಬಿಗಿ ಭದ್ರತೆಯಲ್ಲಿ ಇರಿಸಲಾಗಿದೆ.

ಜಿಲ್ಲೆಯ ಅಕ್ಷರ ದಾಸೋಹ ಇಲಾಖೆಯ ಅಧಿ ಕಾರಿ ಗಂಗಾಧರಪ್ಪ, ತಹಶಿಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮತ್ತು ಶಿಕ್ಷಣ ಇಲಾಖೆಯ ಬಿಇಓ ಸಿದ್ದಪ್ಪ ನವರ ಸಮ್ಮುಖದಲ್ಲಿ ಮತ ಯಂತ್ರಗಳನ್ನು ಭದ್ರಪಡಿಸಲಾಗಿದೆ. ನಾಡಿದ್ದು ದಿನಾಂಕ 30ರ ಗುರುವಾರ ಫಲಿತಾಂಶ ಪ್ರಕಟವಾಗಲಿದೆ. ಚುನಾವಣಾ ಭರಾಟೆಯ ನಂತರ ಅಭ್ಯರ್ಥಿಗಳು ಫಲಿತಾಂಶದ ನಿರೀಕ್ಷೆಯಲ್ಲಿದ್ದಾರೆ.

ಈ ಸಂದರ್ಭದಲ್ಲಿ ನಗರ ಠಾಣೆಯ ಪಿಎಸ್ಐ ಸುನಿಲ್ ಬಸವರಾಜ್ ತೆಲಿ, ಪ್ರಭಾರಿ ಪಿಎಸ್ಐ ಪಾಂಡುರಂಗ, ಕೃಷಿ ಇಲಾಖೆಯ ನಾರದಪ್ಪ, ಅಕ್ಷರ ದಾಸೋಹ ಇಲಾಖೆಯ ರಾಮಕೃಷ್ಣಪ್ಪ, ನಗರಸಭೆ ಚುನಾವಣೆ ಅಧಿಕಾರಿ ಶಿವಕುಮಾರ್, ಚಂದ್ರನಾಯ್ಕ್, ಉಮೇಶ್ ಇತರರು ಉಪಸ್ಥಿತರಿದ್ದರು.

## ಮೊಲ್ನುಪಿರಾವಿರ್‌ಗೆ ಸಮ್ಮತಿ

**(1ನೇ ಪುಟದಿಂದ)** ಈಗಾಗಲೇ ತುರ್ತು ಬಳಕೆಯ ಒಪ್ಪಿಗೆ ನೀಡಲಾಗಿದೆ. ಕೊರ್ಬೊವ್ಯಾಕ್ಸ್ ಲಸಿಕೆ ದೇಶೀ ಯವಾಗಿ ರೂಪಿಸಲಾದ ಮೊದಲ ಆರ್.ಬಿ.ಡಿ. ಪ್ರೊಟೀನ್ ಸಬ್ - ಯುನಿಟ್ ಲಸಿಕೆಯಾಗಿದೆ. ಇದನ್ನು ಹೈದರಾಬಾದ್‌ನ ಬಯಾಲಜಿಕಲ್ - ಇ ಕಂಪನಿ ರೂಪಿಸಿದೆ. ನ್ಯಾನೋ ಪಾರ್ಟಿಕಲ್ ಲಸಿಕೆಯಾದ ಕೊವೊವ್ಯಾಕ್ಸ್ ಅನ್ನು ಪುಣೆಯ ಎಸ್.ಐ.ಐ. ಉತ್ಪಾದಿಸಲಿದೆ ಎಂದು ಮಾಂಡವೀಯ ಹೇಳಿದ್ದಾರೆ. ಮೊಲ್ನುಪಿರಾವಿರ್ ಆಂಟಿವೈರಲ್ ಔಷಧಿಯಾಗಿದೆ. ಇದನ್ನು ದೇಶದಲ್ಲಿ 13 ಕಂಪನಿಗಳು ಉತ್ಪಾದಿಸಲಿವೆ. ರೋಗ ಉಲ್ಬಣವಾಗುವ ಅಪಾಯ ಇರುವ ವಯಸ್ಕರಿಗೆ ಈ ಔಷಧಿ ನೀಡಲಾಗುವುದು.

## ಕಲಿಕಾ ಕೇಂದ್ರಗಳಲ್ಲೇ ಲಸಿಕೆ: ಸಿಎಂ

**(1ನೇ ಪುಟದಿಂದ)** ಡೋಸ್ ಪಡೆಯದವರು ತಮ್ಮ ಆರೋಗ್ಯದ ದೃಷ್ಟಿಯಿಂದ ಲಸಿಕೆ ಪಡೆದುಕೊಳ್ಳಬೇಕೆಂದು ಮುಖ್ಯ ಮಂತ್ರಿಯವರು ಇದೇ ಸಂದರ್ಭದಲ್ಲಿ ಮನವಿ ಮಾಡಿದರು.

ಪ್ರತ್ಯೇಕವಾಗಿ ಮಾತನಾಡಿದ ಆರೋಗ್ಯ ಸಚಿವ ಡಾ. ಸುಧಾಕರ್ 15 ರಿಂದ 18 ವರ್ಷದೊಳಗಿನ 45 ಲಕ್ಷ ಮಕ್ಕಳಿದ್ದು, ಅಂತಹವರಿಗೆ ಮೊದಲ ಹಂತದ ಲಸಿಕೆಯನ್ನು ಜನವರಿ 3 ರಿಂದ ನೀಡಲಾಗುವುದು ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರ ಕೊವ್ಯಾಕ್ಸಿನ್ ಲಸಿಕೆಯನ್ನು ಮಕ್ಕಳಿಗೆ ನೀಡುವಂತೆ ಸೂಚಿಸಿದೆ. ಈ ಲಸಿಕೆ ಪಡೆದ ಮಕ್ಕಳು 30 ದಿನಗಳ ತರುವಾಯ ಎರಡನೇ ಡೋಸ್ ಪಡೆದುಕೊಳ್ಳಬೇಕು. ಅಗತ್ಯ ಲಸಿಕೆಯನ್ನು ಜನವರಿ 3 ರ ವೇಳೆಗೆ ಶೇಖರಣೆ ಮಾಡಲಾಗುವುದು ಎಂದರು.

## ವಿದ್ಯಾರ್ಥಿ ವೇತನ ಪಾವತಿ

**(1ನೇ ಪುಟದಿಂದ)** ಕಳಿಸಲಿದೆ. ಇದರಲ್ಲಿರುವ ಕೋಡ್ ಬಳಸಿ ವಿದ್ಯಾರ್ಥಿಗಳು ಇ-ರುಪಿ ಪಡೆಯಲಿದ್ದಾರೆ. ಅದನ್ನು ಗುರುತಿಸಲಾದ ಕಾಲೇಜುಗಳು ಇಲ್ಲವೇ ಸಂಸ್ಥೆಗಳಿಗೆ ಶುಲ್ಕ ಪಾವತಿಗಾಗಿ ಬಳಸಬಹುದಾಗಿದೆ ಎಂದು ಎನ್.ಸಿ.ಸಿ.ಪಿ.ಐ. ತಿಳಿಸಿದೆ.

ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಇ-ರುಪಿ ಅನ್ನು ಆಪ್ ಇಲ್ಲವೇ ಪಿಓಎಸ್ ಯಂತ್ರದ ಮೂಲಕ ಸ್ಕ್ಯಾನ್ ಮಾಡಿ ಹಣ ಪಡೆಯಬಹುದಾಗಿದೆ.

## ಹರಪನಹಳ್ಳಿ ತಾ. ಸ್ಥಿರಾಸ್ತಿಗಳ ಮಾರುಕಟ್ಟೆ ಬೆಲೆ ಪರಿಷ್ಕರಣೆ

ಹರಪನಹಳ್ಳಿ, ಡಿ.28- ತಾಲ್ಲೂಕು ಉಪ ನೋಂದಣಾಧಿಕಾರಿಗಳ ಕಚೇರಿ ವ್ಯಾಪ್ತಿಗೆ ಬರುವ ಸ್ಥಿರಾಸ್ತಿಗಳ ಮಾರುಕಟ್ಟೆ ಬೆಲೆಗಳನ್ನು 2021-22ನೇ ಸಾಲಿನಲ್ಲಿ ಪರಿಷ್ಕರಿಸಿ ಜಾರಿಗೆ ತರಬಯಸಿರುವ ಮಾರುಕಟ್ಟೆ ಮೌಲ್ಯದ ಕರಡು ದರ ಪಟ್ಟಿಗಳನ್ನು ಉಪನೋಂದಣಾಧಿಕಾರಿಗಳ ಕಾರ್ಯಾಲಯ, ತಹಶೀಲ್ದಾರ್‌ರವರ ಕಾರ್ಯಾಲಯ ಹಾಗೂ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಮತ್ತು ಪುರಸಭೆ ಹರಪನಹಳ್ಳಿ ಹಾಗೂ ಸಹಾಯಕ ಕೃಷಿ ಇಲಾಖೆ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕರ ಕಾರ್ಯಾಲಯದಲ್ಲಿ ಪ್ರಕಟಿಸಲಾಗಿದೆ.

ಸಾರ್ವಜನಿಕರು ತಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಲಿಖಿತ ರೂಪದಲ್ಲಿ 15 ದಿನದೊಳಗೆ ಉಪ ನೋಂದಣಾಧಿಕಾರಿಗಳು ಹರಪನಹಳ್ಳಿ ಇವರಿಗೆ ಸಲ್ಲಿಸಬಹುದು.

## ದೆಹಲಿಯಲ್ಲಿ ಶಾಲೆಗಳು ಬಂದ್

**(1ನೇ ಪುಟದಿಂದ)** ನೀಡಿರುವ ದೆಹಲಿ ಪೋಷಕರ ಒಕ್ಕೂಟದ ಅಧ್ಯಕ್ಷರಾದ ಅಪರಾಜಿತ ಗೌತಮ್, ಪದೇ ಪದೇ ಶಾಲೆಗಳನ್ನು ಮುಚ್ಚುವುದು ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಸರ್ಕಾರ ಈ ವರ್ಷದ ಶಿಕ್ಷಣ ಯೋಜನೆಯಲ್ಲಿ ಸಂಪೂರ್ಣ ವಿಫಲವಾಗಿದೆ ಎಂದಿದ್ದಾರೆ.

ಶಾಲೆಗಳನ್ನು ಮುಚ್ಚಿರುವುದಕ್ಕೆ ಯಾವುದೇ ಸಮರ್ಥನೆ ಇಲ್ಲವೇ ವೈಜ್ಞಾನಿಕ ಕಾರಣಗಳಿಲ್ಲ. ಅಕ್ಕ -ಪಕ್ಕದ ರಾಜ್ಯಗಳಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ದೆಹಲಿಯಲ್ಲೇನು ವಿಶೇಷ? ಎಂದು ಅಖಿಲ ಭಾರತ ಪೋಷಕರ ಒಕ್ಕೂಟದ ಅಧ್ಯಕ್ಷ ಅಶೋಕ್ ಅಗರ್‌ವಾಲ್ ಪ್ರಶ್ನಿಸಿದ್ದಾರೆ.

ಕಳೆದ ವರ್ಷ ಮಾರ್ಚ್ ತಿಂಗಳ ನಂತರ ಶಾಲಾ - ಕಾಲೇಜುಗಳನ್ನು ಕೊರೊನಾ ಕಾರಣದಿಂದ ಹಲವು ಬಾರಿ ಮುಚ್ಚಲಾಗಿದೆ. ಕಲಿಕಾ ಅಂತರ ನೀಗಿಸುವ ಬಗ್ಗೆ ಯಾವುದೇ ಸ್ಪಷ್ಟ ಯೋಜನೆ ಇಲ್ಲ ಎಂದು ಶಿಕ್ಷಣ ಪರಿಣಿತರು ಆಕ್ಷೇಪಿಸಿದ್ದಾರೆ. ದೆಹಲಿ ಸರ್ಕಾರ ಮಕ್ಕಳ ಬಗ್ಗೆ ಕಾಳಜಿ ತೋರುತ್ತಿಲ್ಲ. ಬಾರ್ ಹಾಗೂ ರೆಸ್ಟೋರೆಂಟ್‌ಗಳನ್ನು ತೆರೆಯಲಾಗಿದೆ, ಆದರೆ ಶಾಲೆಗಳನ್ನು ಮಾತ್ರ ಮುಚ್ಚಿರುವುದು ನಾಚಿಕೆಗೇಡು ಎಂದು ಕೆಲ ಪೋಷಕರು ಸಾಮಾಜಿಕ ಜಾಲತಾಣಗಳಲ್ಲಿ ಟೀಕಿಸಿದ್ದಾರೆ.

## ಬಸ್ ಹರಿದು ಪಾದಚಾರಿ ಸಾವು

**(1ನೇ ಪುಟದಿಂದ)** ಯಲ್ಲಿ ಪ್ರಕರಣ ದಾಖಲಾಗಿದೆ.

**ಅಪಘಾತಕ್ಕೆ ಆಕ್ರೋಶ :** ಅಪಘಾತದ ಬಳಿಕ ಘಟನೆ ಖಂಡಿಸಿ ಸಾರ್ವಜನಿಕರು ಡಿಕ್ಕಿಪಡಿಸಿದ ಬಸ್‌ನ ಗಾಜು ಪುಡಿ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಎಸ್ಪಿ ಆಗಮಿಸುವಂತೆ ಪಟ್ಟು ಹಿಡಿದು ಪ್ರತಿಭಟಿಸಿದ್ದಾರೆ. ಈ ವೇಳೆ ಸ್ಥಳದಲ್ಲಿ ಉದ್ರಿಕ್ತ ವಾತಾವರಣ ನಿರ್ಮಾಣವಾಗಿತ್ತು. ಈ ಪ್ರತಿಭಟನೆಯಿಂದ ಟ್ರಾಫಿಕ್ ಜಾಮ್ ಆಗಿತ್ತು. ಬಡಾವಣೆ ಠಾಣೆ ಪೊಲೀಸರು ಹಾಗೂ ದಕ್ಷಿಣ ಸಂಚಾರ ಪೊಲೀಸರು ಜನರನ್ನು ಚದುರಿಸಿ ಟ್ರಾಫಿಕ್ ಜಾಮ್ ತೆರವುಗೊಳಿಸಿ, ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ಪಿ.ಬಿ. ರಸ್ತೆಯ ರೇಣುಕಾ ಮಂದಿರದ ಬಳಿ ಕಳೆದ ವಾರವಷ್ಟೇ ಪಾದಚಾರಿ ಮಹಿಳೆಯ ಮೇಲೆ ಟಿಪ್ಪರ್ ಲಾರಿಯೊಂದು ಹರಿದ ಪರಿಣಾಮ ಆಕೆ ಸ್ಥಳದಲ್ಲೇ ಸಾವಿಗೀಡಾಗಿದ್ದನ್ನು ಇಲ್ಲಿ ಸ್ಮರಿಸಬಹುದು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಕೆಲಸಕ್ಕೆ ಬೇಕಾಗಿದ್ದಾರೆ**
'ನಿರ್‌ವಿನ್ಸ್ ಕೆಫೆ'ಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ-ಯುವತಿಯರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30. ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಪಿಯುಸಿ ಪಾಸ್ / ಫೇಲ್.
ಮೊ. 93804 69079

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಹೊಸ ಮೂರು ಮನೆಗಳು ಬಾಡಿಗೆಗೆ**
ಶಿವಕುಮಾರ ಸ್ವಾಮಿ ಬಡಾವಣೆ ಎರಡನೇ ಹಂತ 558/13 8ನೇ ಬಿ.ಕ್ರಾಸ್‌ನ ಮೊದಲನೇ ಮಹಡಿಯಲ್ಲಿ ಅಟ್ಯಾಚ್ಡ್ ಕಮೋಡ್, ಇಂಡಿಯನ್ ಟಾಯ್ಲೆಟ್, 2 ರೂಂಗಳು ಇರುವಂತಹ 2 ಹೊಸ ಮನೆಗಳು ಮತ್ತು ಎರಡನೇ ಮಹಡಿಯಲ್ಲಿ ಅಟ್ಯಾಚ್ಡ್ ಬಾತ್‌ರೂಂ, ಅಡುಗೆ ಮನೆ, ಸಿಂಗಲ್ ರೂಂ ಇರುವ ಮನೆಗಳು ಬಾಡಿಗೆ ಅಥವಾ ಲೀಸ್‌ಗೆ ಇವೆ. ಸಂಪರ್ಕಿಸಿ (ಸಸ್ಯಹಾರಿಗಳಿಗೆ ಮಾತ್ರ)
94811 62162, 99725 48467

**ಸೈಟು ಮಾರಾಟಕ್ಕಿದೆ**
ರಶ್ಮಿ ಹಾಸ್ಟೆಲ್ ಹಿಂಭಾಗ 40 ಅಡಿ ರೋಡಿಗೆ ಪೂರ್ವ-ಉತ್ತರ ಕಾರ್ನರ್ ಸೈಟು ಮಾರಾಟಕ್ಕಿದೆ. (ಅಳತೆ-2200 ಅಡಿ) Rate-1900
86181 82332

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್ ಮತ್ತು ಹೋಟೆಲ್‌ನಲ್ಲಿ ಸಪ್ಲೈಯರ್ ಬೇಕಾಗಿದ್ದಾರೆ.
99455 97132
84315 41866

**ಬೇಕಾಗಿದ್ದಾರೆ**
1. ದಾವಣಗೆರೆಯಲ್ಲಿ ಮನೆ ಮತ್ತು ಹೊರಗಿನ ಕೆಲಸ ಮಾಡಲು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಹೊಂದಿರಬೇಕು)
2. ಹರಿಹರದ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
70185 88900
95388 70257

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ ಡ್ಯೂಪ್ಲೆಕ್ಸ್ ಮನೆ 2 BHK P.J Extension, 5th Main, Davanagere. (ಸಸ್ಯಹಾರಿಗಳಿಗೆ ಮಾತ್ರ)
ಮೊ. 63609 20353

**FURNITURES AVAILABLE**
Used wooden furnitures, Table, Steel Cots & Steel Chairs are for discounted sale.
Ph.: 72597 56936

**ಬಾಡಿಗೆಗೆ ಇದೆ**
ಬಿ.ಕೆ. ಬಾರ್ ಅಂಡ್ ರೆಸ್ಟೋರೆಂಟ್ ಮೋತಿ ನಗರ, ಬಾಡಾ ಕ್ರಾಸ್, ದಾವಣಗೆರೆ. ವೆಜ್ & ನಾನ್ ವೆಜ್ ಹೋಟೆಲ್‌ಗಳಿಗೆ ಮಳಿಗೆಗಳು ಬಾಡಿಗೆಗೆ ಇವೆ.
ಫೋ. : 98441 01178

**2/3BHK ಮನೆ ಬಾಡಿಗೆಗೆ ಬೇಕಾಗಿದೆ**
ಪಾರ್ಕಿಂಗ್ ಹಾಗೂ ಬೋರ್ ವೆಲ್ ಸೌಲಭ್ಯ ವುಳ್ಳ 2 ಅಥವಾ 3 BHK ಸುಸಜ್ಜಿತ ಮನೆ ಎಸ್.ಎಸ್. ಬಡಾವಣೆ, ಸಿದ್ದವೀರಪ್ಪ ಬಡಾವಣೆ, ಪಿ..ಜೆ. ಬಡಾವಣೆ, ಎಂ.ಸಿ.ಸಿ.'ಎ' ಬ್ಲಾಕ್ ಹಾಗೂ 'ಬಿ' ಬ್ಲಾಕ್, ಕುವೆಂಪುನಗರ, ವಿದ್ಯಾ ನಗರ, ತರಳಬಾಳು ಬಡಾವಣೆಗಳಲ್ಲಿ ಬಾಡಿಗೆಗೆ ಬೇಕಾಗಿದೆ.ಸಂಪರ್ಕಿಸಿ
94481 10895

**ವಧು-ವರರು ಬೇಕಾಗಿದ್ದಲ್ಲಿ ಸಂಪರ್ಕಿಸಿ**
98806 43313
(Whatsapp Number)
93802 11238

**ಆಫೀಸ್ ಅಥವಾ ವಾಣಿಜ್ಯಕ್ಕೆ ಬಾಡಿಗೆಗಿದೆ**
ಫಸ್ಟ್‌ಫ್ಲೋರ್ ಆಫೀಸ್ ಅಥವಾ ವಾಣಿಜ್ಯಕ್ಕೆ 700 ಅಡಿ ಹಾಗೂ ಗ್ರೌಂಡ್‌ಫ್ಲೋರ್ ಮಳಿಗೆ 10×9 ಅಡಿ, ಎಸ್.ಎಸ್ ಲೇಔಟ್ ಬಿ'ಬ್ಲಾಕ್, ರಿಂಗ್‌ರೋಡ್. ಕೆ. ಎಸ್.ಎಫ್.ಸಿ ಕಾವೇರಿ ಎದುರು ದಾವಣಗೆರೆ ಲಭ್ಯವಿದೆ.
ಮೊ. 94496 02600

**House/Site/Land**
property disputes, contact for Legal Advise.
Honnurswamy Vanjre
87926 04196

**Shanthi Agencies**
TVS Showroom-Chitradurga
ಬೇಕಾಗಿದ್ದಾರೆ
Boys-male: 1) Showroom Sales-02
2) Spares Incharge-01 3) Service Executive-02
4)RTO Work-01 5)Service Mechanical-4
Girls : Female : 1) Computer & Cash-2
2) Service Calling-1
Contact : 92432 19553

**Room For Rent**
Single Room at Second Floor available for rent.
# 1982/2, 6th Cross, Siddaveerappa layout, Davangere.
94806 93506

**HOUSE FOR RENT**
1BHK Ground Floor Nijalingappa Layout.
Contact No
98808 12670

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್
94489 21346
82177 72482

**ಕೆಲಸಕ್ಕೆ ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಯುವತಿಯರು ಹಾಗೂ ಹುಡುಗರು ಬೇಕಾಗಿದ್ದಾರೆ. ದಯವಿಟ್ಟು ಸಂಪರ್ಕಿಸಿ ಈ ನಂಬರಿಗೆ
80734 07422
98441 01231

**WANTED**
Experienied Office Boy, Delivery Boy
Divine Associates
Opp Old bus stand, Behind Canara Bank, Davangere.
98453 33987, 08192 252987

**ಮನೆ ಬಾಡಿಗೆಗೆ ಇದೆ**
ಬೋರ್ ಮತ್ತು ನಲ್ಲಿ ನೀರಿನ ಸೌಕರ್ಯವಿರುವ 2ಬೆಡ್‌ರೂಂವುಳ್ಳ ಸುಸಜ್ಜಿತವಾದ ಮೊದಲನೆ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. " ಈರಮ್ಮ ನಿಲಯ" ಎಂ.ಸಿ.ಸಿ 'ಎ' ಬ್ಲಾಕ್, 4ನೇ ಮುಖ್ಯರಸ್ತೆ, ಹಳೇ ಗುರು ಸ್ಕ್ಯಾನಿಂಗ್ ಪಕ್ಕ, ದಾವಣಗೆರೆ. ವಿಚಾರಿಸಿ
98868 25228
98866 53398

**ಮಾರಾಟಕ್ಕೆ**
ಆವರಗೆರೆ (ಸಿದ್ದಲಿಂಗೇಶ್ವರ ಸ್ಕೂಲ್ ಹತ್ತಿರ) 30×50 (ಪೂರ್ವ), ಕುವೆಂಪು ನಗರ ಸೈಟ್ (ಕಾರ್ನರ್) 40×50, ಶಕ್ತಿನಗರ ಸೈಟ್ (ಉತ್ತರ) 30×45 ಮತ್ತು 30×60 (ಪೂರ್ವ), ಸಿದ್ದವೀರಪ್ಪ ಬಡಾವಣೆ ಸೈಟ್ (ಪಶ್ಚಿಮ) 48×50, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64
78996 36597, 99165 25828

**ಮಳಿಗೆಗಳು ಬಾಡಿಗೆಗೆ ಇವೆ**
2 ಮಳಿಗೆಗಳು ಬಾಡಿಗೆಗೆ ಇವೆ. APICCS ಬಿಲ್ಡಿಂಗ್, ಹದಡಿ ರಸ್ತೆ, ದಾವಣಗೆರೆ.
ಮೊ. 98444 20150

**ಲಿಂಗಾಯಿತ ವಧು ಬೇಕಾಗಿದೆ**
ಲಿಂಗಾಯಿತ ಒಳ್ಳೆಯ ಮನೆತನದ 29 ವರ್ಷದ B.E, M.S USA ದಲ್ಲಿ ಇಂಜಿನಿಯರ್ ಆಗಿರುವ ವರನಿಗೆ, B.E, M.S ಮಾಡಿರುವ ವಧು ಬೇಕಾಗಿದೆ.
ಮೊ. 98807 29108

**ಮನೆ ಮಾರಾಟಕ್ಕಿದೆ**
30x40 ಅಳತೆಯ ಉತ್ತರ ದಿಕ್ಕಿನ ಗ್ರೌಂಡ್ ಫ್ಲೋರ್ - 2 BHK ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ ಮನೆ, 1 ನೇ ಮಹಡಿ - 2 Rooms (Attached) ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇದ್ದು,ದಾವಣಗೆರೆ ವಿದ್ಯಾನಗರದ ವಿನಾಯಕ ಬಡಾವಣೆಯ 1 ನೇ ಮೇನ್,6 ನೇ ಕ್ರಾಸ್ ಇಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ
99022 20936, 95358 54517

**Joint Venture Building**
ಜಾಯಿಂಟ್ ವೆಂಚರ್ ಮೇರೆಗೆ ನಿಮ್ಮ ಖಾಲಿ ನಿವೇಶನಗಳಲ್ಲಿ 3-4 ಮಹಡಿ ಮನೆಗಳನ್ನು ನಮ್ಮ ಸ್ವಂತ ಬಂಡವಾಳದಿಂದ ನಿರ್ಮಿಸಿ ನಾಲ್ಕು ಭಾಗ ಮನೆಗಳು/ ಎಲ್ಲಾ ಮನೆ ಮಾರಾಟ ಮಾಡಿದ ಹಣದಲ್ಲಿ 40% ಹಣ ನೀಡಲಾಗುವುದು.
ಬಿಲ್ಡರ್ ಹೊನ್ನೂರುಸ್ವಾಮಿ ವಾಂಜ್ರೆ
87926 04196

**WANTED**
Order Booking Boys (PUC) For Surgical Products (Experience Candidate Only) Delivery Boys 2.
A.K.TRADERS ASHIRWAD
Bapuji Hospital Road,P.J Extension, Davangere - 577004

**ಗುಮಾಸ್ತರು ಬೇಕಾಗಿದ್ದಾರೆ**
ದಾವಣಗೆರೆ ಅಂಗಡಿ ಕೆಲಸಕ್ಕೆ ಗುಮಾಸ್ತರು ಬೇಕಾಗಿದ್ದಾರೆ. ಸಂಪರ್ಕಿಸುವ ಸಮಯ: ಬೆಳಿಗ್ಗೆ 11 ರಿಂದ ಸಂಜೆ 5ರ ಒಳಗೆ
99864 67206

**Commercial Building For Rent**
Three Floor Commercial Building Situated at K.R Road (Near Shanthi Talkies) suitable for Nursing Homes/ Hospitals is availabele for rent.
Contact : 98800 64464

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**WANTED**
Receptionist
English and Hindi Knowledge is must.
Contact
'Apoorva Resort'
94481 14684

**NAME CLARIFICATION**
I. D MALTHESH RAO S/o DEVENDRAPPA resident at #311/2, Ambabhavani Nilaya. Nalaband Street Shivaji nagar, Davanagere do here by solemnly swear and affirm on oath as here under.
That My name has been written in my Aadhar Card as D. MALTHESH RAO and in my Passport as MALATHESHARAO and in my PAN Card as D.MALTHESH RAO
I, write to state that my above all names referred to me only and to none else. In future, I will be using my name as D. MALTHESH RAO S/o DEVENDRAPPA.
-D. MALTHESH RAO

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಬೇಕಾದ ವಿಳಾಸ
ಕಿರಣ್ ಎಂಟರ್‌ಪ್ರೈಸಸ್
4ನೇ ಮೇನ್, 1ನೇ ಕ್ರಾಸ್, ವಿನೋಬನಗರ, ದಾವಣಗೆರೆ.
ಮೊ. 87629 02569

**Change of Name**
ಅಮೀನಾ ಬಿ ಆದ ನಾನು ತಿಳಿಸುವುದೇನೆಂದರೆ ನನ್ನ ಶಾಲಾ ದಾಖಲಾತಿಯಲ್ಲಿ ಹಾಗೂ ರೇಷನ್ ಕಾರ್ಡ್‌ನಲ್ಲಿ ಅಮೃತ . ಸಿ ಎಂದು ಹೆಸರಿರುತ್ತದೆ. ದಿ. 28.12.2021 ರಂದು ನನ್ನ ಹೆಸರನ್ನು ಅಮೀನಾ.ಬಿ ಎಂದು ನೋಟರಿ ಸಮಕ್ಷಮದಲ್ಲಿ ಬದಲಾಯಿಸಿಕೊಂಡಿರುತ್ತೇನೆ.

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಚೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**FOR SALE**
Honda, Dio Scooter for sale Model 2018 very good Condition
94812 47552

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು



|| ಶ್ರೀ ಹಂಪಿ ವಿರೂಪಾಕ್ಷೇಶ್ವರ ಪ್ರಸನ್ನ ||
**ನಾಲ್ಕನೇ ಪುಣ್ಯಸ್ಮರಣೆ**



ದಿ|| ಶ್ರೀಮತಿ ಗಿರಿಜ ಎಂ. ಜವಳಿ
ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ....
ಪತಿ : ಮಂಜುನಾಥ ಎ. ಜವಳಿ
ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು, ದಾವಣಗೆರೆ. ಮೊ: 98445 73023

**ಹದಿಮೂರನೇ ವರ್ಷದ ಪುಣ್ಯಸ್ಮರಣೆ**




ದಿ|| ಕೆ.ಎಸ್. ರೇವಣಸಿದ್ದಪ್ಪ
ಬಸಾಪುರ
ಲಿಂಗೈಕ್ಯ : 29.12.2008
ಮಾಜಿ ಅಧ್ಯಕ್ಷರು, ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘ, (ರಿ.) ದಾವಣಗೆರೆ ತಾ|| ಘಟಕ.
ನಿಮ್ಮ ಚಿಂತನೆ, ಆದರ್ಶಗಳು ನಮಗೆ ದಾರಿದೀಪ
ಸದಾ ನಿಮ್ಮ ಸ್ಮರಣೆಯಲ್ಲಿರುವ....
ಬಿ. ಸಿದ್ದನಗೌಡ ಮತ್ತು ಸಹೋದರರು ಹಾಗೂ ಸಹೋದರಿ ಮಕ್ಕಳು, ಮೊಮ್ಮಕ್ಕಳು ಹಾಗೂ ಶಿಕ್ರಪ್ಪಳ ವಂಶಸ್ಥರು ಬಸಾಪುರ, ಬೇತೂರು, ಬಿ.ಕಲಪನಹಳ್ಳಿ.


### ಅಮರಾವತಿ ಕಾಲೋನಿಯ ನಿಂಗಮ್ಮ ನಿಧನ



ಹರಿಹರ ತಾ|| ಅಮರಾವತಿ ಕಾಲೋನಿ ನಿವಾಸಿ ಟಿ. ವೆಂಕಟೇಶಪ್ಪ, (ನಿವೃತ್ತ ಕೆಇಬಿ ಎಇಇ) ಇವರ ಧರ್ಮಪತ್ನಿ ಶ್ರೀಮತಿ ನಿಂಗಮ್ಮ (62) ಅವರು ದಿನಾಂಕ 28.12.2021ರ ಮಂಗಳವಾರ ಮಧ್ಯಾಹ್ನ 12.45ಕ್ಕೆ ನಿಧನರಾ ದರು. ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.12.2021ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಅಮರಾವತಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

### ಅಡಿವೆಪ್ಪ ಪಲ್ಲಾಗಟ್ಟೆ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ ಎವಿಕೆ. ಕಾಲೇಜ್ ರಸ್ತೆ , ಕೆ.ಸಿ. ಪಲ್ಲಾಗಟ್ಟೆ ಬಿಲ್ಡಿಂಗ್ ವಾಸಿ ಅಡಿವೆಪ್ಪ ಪಲ್ಲಾಗಟ್ಟೆ (68) ಇವರು ದಿನಾಂಕ 28.12.2021ರ ಮಂಗಳವಾರ ರಾತ್ರಿ 7 ಗಂಟೆಗೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.12.2021ರ ಬುಧವಾರ ಮಧ್ಯಾಹ್ನ 1 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ನಗರದಲ್ಲಿ ಇಂದು ನಟ ಪುನೀತ್ ನುಡಿ ನಮನ ಕಾರ್ಯಕ್ರಮ

ದಾವಣಗೆರೆ, ಡಿ.28- ಅಖಂಡ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಾಳೆ ದಿನಾಂಕ 29 ರ ಬುಧವಾರ ಸಂಜೆ 6 ಕ್ಕೆ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಶಿವಯೋಗಾಶ್ರಮದ ಆವರಣದಲ್ಲಿ ಕರ್ನಾಟಕ ರಾಜ್ಯೋತ್ಸವ, ನಟ ಪುನೀತ್ ಗೀತ ನಮನ, ನೇತ್ರದಾನ ಹಾಗೂ ದೇಹದಾನ ಅಭಿಯಾನ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ವೇದಿಕೆ ರಾಜ್ಯ ಕಾರ್ಯಾಧ್ಯಕ್ಷ ಎಸ್.ಟಿ. ಸೋಮಶೇಖರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಶಿವಮೂರ್ತಿ ಮುರುಘಾ ಶರಣರು ಸಾನ್ನಿಧ್ಯ ವಹಿಸುವರು. ಶ್ರೀ ಬಸವ ಪ್ರಭು ಸ್ವಾಮೀಜಿ ಸಮ್ಮುಖ ವಹಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ. ವೇದಿಕೆ ರಾಜ್ಯಾಧ್ಯಕ್ಷ ಬಿ.ಜೆ. ಅಜಯಕುಮಾರ್ ಅಧ್ಯಕ್ಷತೆ ವಹಿಸುವರು. ಉತ್ತರ ವಿಧಾನಸಭಾ ಶಾಸಕ ಎಸ್.ಎ. ರವೀಂದ್ರನಾಥ್ ನೇತ್ರದಾನ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ಹಜರತ್ ಮಹಮ್ಮದ್ ಹನೀಫ್ ರಜಾ, ಅಂತೋಣಿ ನಜರೇಟ್, ಎಸ್.ವಿ. ರಾಮಚಂದ್ರ, ಯಶವಂತರಾವ್ ಜಾಧವ್, ಬಿ. ವೀರಣ್ಣ, ಗೀತಾ, ಜೆ. ಅಮಾನುಲ್ಲಾಖಾನ್, ಜೆ.ಎನ್. ಶ್ರೀನಿವಾಸ್, ಎಂ. ಆನಂದ್, ಹನುಮಂತಪ್ಪ ಉಪ್ಪಾರ್ ಹದಡಿ, ಡಿ.ಸಿ. ಮೋಹನ್ ಕುಮಾರ್, ಆರ್. ಪ್ರತಾಪ್ ಮತ್ತಿತರರು ಭಾಗವಹಿಸಲಿದ್ದಾರೆ.

ದಾವಣಗೆರೆ ಫ್ರೆಂಡ್ಸ್ ಮೇಲೋಡಿ ಆರ್ಕೆಸ್ಟ್ರಾ ತಂಡದವರು 'ಪುನೀತ್ ಗೀತ ನಮನ' ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ವೇದಿಕೆ ಪದಾಧಿಕಾರಿಗಳಾದ ಡಾ. ಜೈಮುನಿ, ಮೋಹನ್, ಎಲ್. ದೇವರಾಜ್, ಪ್ರದೀಪ್ ಕುಮಾರ್, ತಾಹೀರ್, ಕೆ.ಹೆಚ್. ರೇವಣಸಿದ್ಧಪ್ಪ, ಅಜಮತ್‌ವುಲ್ಲಾ, ಸಿಕಂದರ್ ಉಪಸ್ಥಿತರಿದ್ದರು.

# ದೀಟೂರಿನಲ್ಲಿ ಇಂದು ಮಹೇಶ್ವರ ಸ್ವಾಮಿಯ ಪಲ್ಲಕ್ಕಿ ಉತ್ಸವ

ಹರಿಹರ ತಾಲ್ಲೂಕಿನ ದೀಟೂರು ಗ್ರಾಮದ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ ಪ್ರಯುಕ್ತ ಇಂದು ಮಧ್ಯಾಹ್ನ 3 ಗಂಟೆಗೆ ಶ್ರೀ ಮಹೇಶ್ವರ ಸ್ವಾಮಿ ಪಲ್ಲಕ್ಕಿ ಮಹೋತ್ಸವ ನಡೆಯುವುದು. ನಂತರ ರಾತ್ರಿ 10 ಗಂಟೆಗೆ ಮನರಂಜನಾ ಕಾರ್ಯಕ್ರಮ ನಡೆಯುವುದು.

# ಬೇಡ ಜಂಗಮ ಮಹಾಸಭಾದ ಪ್ರತಿಭಟನೆ



ದಾವಣಗೆರೆ, ಡಿ.28- ಬೇಡ ಜಂಗಮ ಜನಾಂಗವನ್ನು ಗುರಿಯಾಗಿಸಿಕೊಂಡು ತೊಂದರೆ ನೀಡುತ್ತಿರುವುದಾಗಿ ಆರೋಪಿಸಿ ಶಾಸಕ ಪ್ರಿಯಾಂಕ ಖರ್ಗೆ, ಡಾ. ಅನ್ನದಾನಿ, ಪಿ. ರಾಜೀವ್, ಲೋಕೋಪಯೋಗಿ ಸಚಿವ ಗೋವಿಂದ್ ಕಾರಜೋಳ ವಿರುದ್ಧ ನಗರದಲ್ಲಿ ಇಂದು ಕರ್ನಾಟಕ ರಾಜ್ಯ ಬೇಡ ಜಂಗಮ ಮಹಾಸಭಾದಿಂದ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಪ್ರತಿಭಟನಾ ಮೆರವಣಿಗೆ ಮುಖೇನ ತೆರಳಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಗಳಿಗೆ ಮನವಿ ಸಲ್ಲಿಸಿದರು.

ಕುಡುಚಿ ಶಾಸಕ ಪಿ. ರಾಜೀವ್ ಸದನದ ಕಲಾಪದಲ್ಲಿ ಕೆಲವು ಶಾಸಕರೊಂದಿಗೆ ಸೇರಿ ಉಚ್ಚ ನ್ಯಾಯಾಲಯದ ಆದೇಶ 18012/89ರಲ್ಲಿ ಕುತಂತ್ರದಿಂದ ಹೊರಡಿಸಿದ ಸುತ್ತೋಲೆಯನ್ನು ರದ್ದುಗೊಳಿಸಲಾಗಿದ್ದು, ಈ ಸುತ್ತೋಲೆಯ ಸುಳ್ಳು

## ಬೇಡ ಜಂಗಮ ಜನಾಂಗ ಗುರಿಯಾಗಿಸಿದ್ದಕ್ಕೆ ಆಕ್ಷೇಪ

ಮಾಹಿತಿಯನ್ನು ಸದನಕ್ಕೆ ನೀಡಿ ಸದನದ ಗೌರವವನ್ನು ಹಾಳು ಮಾಡಿರುವುದೂ ಅಲ್ಲದೇ ಅದರ ಮೌಲ್ಯಕ್ಕೆ ಧಕ್ಕೆಯನ್ನುಂಟು ಮಾಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸದನದಲ್ಲಿ ಒಂದು ಜನಾಂಗವನ್ನು ಗುರಿಯಾಗಿಸಿಕೊಂಡು ಸಂವಿಧಾನ ವಿರೋಧಿ ಹೇಳಿಕೆ ನೀಡುತ್ತಿರುವ ರಾಜೀವ್ ಶಾಸಕರಾಗಲು ಅನರ್ಹರಾಗಿದ್ದು, ತಕ್ಷಣವೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಬೇಡ ಜಂಗಮ ಸಮಾಜದ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕದಲ್ಲಿ 1977 ಜುಲೈ 27ರಿಂದ ಜಾರಿಗೆ ಬಂದಿರುವ ರಾಷ್ಟ್ರಪತಿಗಳ ಆದೇಶದಲ್ಲಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಜಂಗಮರು ವಾಸವಿದ್ದ ನಿರ್ಬಂಧ ತೆಗೆದು ಹಾಕಿ, ರಾಜ್ಯಾದ್ಯಂತ ವಾಸವಾಗಿದ್ದಾರೆ ಎಂದು ಹೇಳಿದ್ದಾರೆ. ಹಾಗಾಗಿ, ಬೇಡ ಜಂಗಮರೆಂದು ಗುರುತಿಸಲು ಡಾ. ಯು. ಸೂರ್ಯನಾಥ ಕಾಮತ್ ಅವರು ಸಮಾಜ ಕಲ್ಯಾಣ ಇಲಾಖೆ ಆದೇಶದ ಮೇರೆಗೆ ಕುಲಶಾಸ್ತ್ರ ಅಧ್ಯಯನ ಮಾಡಿಸಿದ್ದು, ಎಲ್ಲಾ ಜಿಲ್ಲೆಗಳಲ್ಲಿ ಬೇಡ ಜಂಗಮರನ್ನು ಗುರುತಿಸಿ, ಅವರ ವರದಿಯನ್ನು ಪಾಲಿಸಲು ಆದೇಶ ಮಾಡಲಾಗಿದೆ. ಆದರೆ ಕೆಲವು ಕುತಂತ್ರಿ ರಾಜಕಾರಣಿಗಳು ದುರುದ್ದೇಶದಿಂದ ಬೇಡ ಜಂಗಮ ಜನಾಂಗವನ್ನು ಗುರಿಯಾಗಿಸಿಕೊಂಡು ಅಧಿಕಾರಿಗಳಿಗೆ ತೊಂದರೆ ಕೊಡುವುದಲ್ಲದೇ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದವರನ್ನು ಹೆದರಿಸುತ್ತಿರುವುದು ದುರ್ದೈವದ ಸಂಗತಿ ಎಂದು ಆಕ್ಷೇಪಿಸಿದರು.

ಪ್ರತಿಭಟನೆಯಲ್ಲಿ ಮಹಾಸಭಾದ ಅರುಣ್‌ಕುಮಾರ್ ಜಡಿಮಠ್, ಜಿಲ್ಲಾಧ್ಯಕ್ಷೆ ದ್ರಾಕ್ಷಾಯಣಮ್ಮ ಟಿ.ಎಂ. ಮಲ್ಲಿಕಾರ್ಜುನಯ್ಯ, ರಾಜೇಶ್ವರಿ ಟಿ.ಎಂ.ಉಮೇಶ್, ಸುವರ್ಣಮ್ಮ ಶಂಕರಯ್ಯ, ಹಾಲಶಂಕರ ಸ್ವಾಮಿ, ವಿಶ್ವಾರಾಧ್ಯ, ಅಕ್ಷತಾ, ರವಿಕುಮಾರ್ ಪೂಜಾರ್, ಅಶೋಕ್ ಸದಾಶಿವಯ್ಯ, ಕೆ.ಎಂ.ಕೊಟ್ರಯ್ಯ, ಸುಜ್ಞಾನಮೂರ್ತಿ, ಚಂದ್ರಮ್ಮ, ಸಂತೋಷ್, ಬೂತೇಶ್, ಹೆಚ್.ಎಂ.ಸುರೇಶ್ ಇಟಗಿ ಸೇರಿದಂತೆ, ಇತರರು ಭಾಗವಹಿಸಿದ್ದರು.

# ನಗರದಲ್ಲಿ ಇಂದು 'ವಿಶ್ವ ಮಾನವ ದಿನಾಚರಣೆ'



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನಾಚರಣೆಯ ಅಂಗವಾಗಿ 'ವಿಶ್ವಮಾನವ ದಿನಾಚರಣೆ' ಕಾರ್ಯಕ್ರಮವು ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ 5 ಕ್ಕೆ ನಡೆಯಲಿದೆ.

ಇದೇ ಸಂದರ್ಭದಲ್ಲಿ ಸಿಂಡಿಕೇಟ್ ಮಾಜಿ ಸದಸ್ಯರೂ, ಮಹಾನಗರಪಾಲಿಕೆಯ ಮಾಜಿ ಸದಸ್ಯರೂ ಆದ ಹೆಚ್.ಎನ್. ಶಿವಕುಮಾರ್ ಅವರ 'ಮುಂಗಾರು' ಕವನ ಸಂಕಲನದ ಬಿಡುಗಡೆ ಕಾರ್ಯಕ್ರಮವೂ ಏರ್ಪಾಡಾಗಿದೆ.

**ಕಾರ್ಯಕ್ರಮದಲ್ಲಿ ಹೆಚ್.ಎನ್. ಶಿವಕುಮಾರ್ ಅವರ 'ಮುಂಗಾರು' ಕವನ ಸಂಕಲನ ಬಿಡುಗಡೆ**

ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ಕುವೆಂಪು ಅವರ ಕುರಿತಾಗಿ ಸಾಹಿತಿ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ ಉಪನ್ಯಾಸ ನೀಡಲಿದ್ದಾರೆ. ಕವನ ಸಂಕಲನದ ಕುರಿತು ಉಪನ್ಯಾಸಕ ಬಸವರಾಜ ಹನುಮಲಿ ಮಾತನಾಡುವರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್.ಉಜ್ಜನಪ್ಪ, ಲಯನ್ಸ್ ಪ್ರಾಂತೀಯ ಅಧ್ಯಕ್ಷ ಇ.ಎಂ.ಮಂಜುನಾಥ ಮುಖ್ಯ ಅತಿಥಿಗಳಾಗಿದ್ದಾರೆ.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಬಿ.ಟಿ.ಪ್ರಕಾಶ್, ಜಾನಪದ ಅಕಾಡೆಮಿಯ ಸಹ ಸದಸ್ಯರಾದ ಶ್ರೀಮತಿ ಸಿ.ಕೆ. ರುದ್ರಾಕ್ಷಿಬಾಯಿ ಪುಟ್ಟನಾಯ್ಕ್ ಮತ್ತು ತಂಡ, ರುಕ್ಮಾಬಾಯಿ ಮತ್ತು ತಂಡ, ಜ್ಞಾನಶ್ರೀ ಸ್ವರಾಲಯದ ವಿದುಷಿ ಸಂಗೀತಾ ರಾಘವೇಂದ್ರ ಅವರುಗಳಿಂದ ಕುವೆಂಪು ಅವರ ಕುರಿತಾಗಿ ಗೀತ ನಮನ ಮತ್ತು ನೃತ್ಯ ಪ್ರದರ್ಶನ ನಡೆಯಲಿದೆ.

# ಇಂದು ಗಂಗಾಮತಸ್ಥ ಸಮಾಜದ ಸಭೆ

ಗಂಗಾಮತಸ್ಥ ಸಮಾಜದ ಕಚೇರಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಸಂಘದ ಜಿಲ್ಲಾಧ್ಯಕ್ಷ ಬಿ.ಕೆ. ಮಂಜುನಾಥ್ ಅಧ್ಯಕ್ಷತೆಯಲ್ಲಿ ಸಭೆ ಕರೆಯ ಲಾಗಿದೆ. ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

# ಬೇಸಿಗೆ ಹಂಗಾಮಿನ ಬೆಳೆಗಳಿಗೆ ಭದ್ರಾ ನೀರು

**(1ನೇ ಪುಟದಿಂದ)** ನಾಲೆಯಲ್ಲಿ ನೀರು ನಿಂತಾಗ ಕಾಮಗಾರಿ ಮಾಡಿ ಮುಗಿಸಬೇಕಿತ್ತು. ನೀರು ಬಿಡುಗಡೆ ಮಾಡುವ ಸಂದರ್ಭದಲ್ಲಿ ಕಾಮಗಾರಿಯ ನೆಪ ಹೇಳಿದರೆ ತೋಟಗಳ ರೈತರಿಗೆ ತೊಂದರೆ ಆಗುವುದಿಲ್ಲವೇ? ಎಂದು ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ ಅವರು, ಎಡ ಮತ್ತು ಬಲದಂಡೆ ನಾಲೆಗಳಿಗೆ ಇಂದಿನಿಂದಲೇ ನೀರು ಬಿಡಿ. ಕುಡಿಯುವ ನೀರಿಗೂ ತೊಂದರೆ ಆಗುತ್ತಿದೆ. ರೈತರೂ ಸಹ ತಕ್ಷಣ ನೀರು ಹರಿಸಿ ಎಂಬ ಒತ್ತಡ ಹಾಕುತ್ತಿದ್ದಾರೆ. ಡ್ಯಾಂ ತುಂಬಿರುವುದರಿಂದ ನೀರು ಹರಿಸುವ ಬಗ್ಗೆ ವಿಳಂಬ ಬೇಡ ಎಂದರು.

ಜೊತೆಗೆ ಕಾಡಾ ಸದಸ್ಯರಾದ ಷಡಾಕ್ಷರಪ್ಪ, ರಘುಮೂರ್ತಿ, ರೈತ ಸಂಘದ ವೈ.ಜಿ. ಮಲ್ಲಿಕಾರ್ಜುನ್, ಯಶವಂತರಾವ್ ಧ್ವನಿ ಸೇರಿಸಿ, ಇಂದಿನಿಂದಲೇ ನಾಲೆಗಳಿಗೆ ನೀರು ಹರಿಸಿ, ಇಲ್ಲದಿದ್ದರೆ ಪ್ರತಿಭಟನೆ ಮಾಡುವುದಾಗಿ ಬೆದರಿಕೆ ಹಾಕಿದರು.

ಆಗ ಭದ್ರಾ ಅಧೀಕ್ಷಕ ಅಭಿಯಂತರ ಚಂದ್ರ ಹಾಸ್ ಮಾತನಾಡಿ, ಜಲಾಶಯದಿಂದ ನಾಲೆಗೆ ನೀರು ಬಿಡುಗಡೆ ಮಾಡುವ ಮೊದಲ ಅಧಿಸೂಚನೆ ಹೊರಡಿಸಬೇಕು. ಅದಕ್ಕಾಗಿ ಎರಡು ದಿನ ಸಮಯ ಬೇಕು ಎಂದಾಗ, ನಿಮ್ಮ ಅಧಿಸೂಚನೆ ಯಾರಿಗೆ ಬೇಕು. ಡ್ಯಾಂ ತುಂಬಿದ ತಕ್ಷಣ ನೀರು ಹರಿಸಿ ಎಂದು ಎಡದಂಡೆ ನಾಲೆ ರೈತರು ಪಟ್ಟು ಹಿಡಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಹೆಚ್.ಆರ್. ಬಸವರಾಜಪ್ಪ ಅವರು, ನೀರು ಬಿಡುಗಡೆಗೆ ಮುನ್ನ ಅಧಿಸೂಚನೆ ಹೊರಡಿಸಲೇಬೇಕು. ಅದಕ್ಕಾಗಿ ಒಂದು ದಿನ ಸಮಯ ಕೊಡಬೇಕು. ಬುಧವಾರ ರಾತ್ರಿಯಿಂದ ಎಡದಂಡೆ ನಾಲೆಗ ನೀರು ಎತ್ತಿ ಎಂದಾಗ ಎಲ್ಲರೂ ಸುಮ್ಮನಾದರು.

ಬಲದಂಡೆ ನಾಲೆಗೆ ನೀರು ಹರಿಸುವ ವಿಷಯವನ್ನು ಚಂದ್ರಹಾಸ್ ಪ್ರಸ್ತಾಪಿಸಿ, ಈ ಹಿಂದೆ ಜನವರಿ 1ರ ನಂತರ ನೀರು ಹರಿಸಿರುವ ಉದಾಹರಣೆ ಇವೆ. ಜೊತೆಗೆ ಸೇತುವೆ ಕಾಮಗಾರಿಗಳು ನಡೆಯುತ್ತಿರುವುದರಿಂದ ಜನವರಿ 6 ರಿಂದ ನೀರು ಹರಿಸುವುದು ಸೂಕ್ತ ಎಂದರು.

ಇದಕ್ಕೆ ಬೆಂಬಲ ನೀಡಿದ ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ಕಾಡಾ ಸದಸ್ಯರಾದ ತೇಜಸ್ವಿ ಪಟೇಲ್, ಗೋವಿನಹಾಳ್ ರಾಜಣ್ಣ, ಹುಣಸಘಟ್ಟದ ಹನುಮಂತಪ್ಪ ಅವರು ನಮ್ಮ ಭಾಗದ ರೈತರೂ ಕೂಡಾ ಜನವರಿ 5ರ ನಂತರ ನೀರು ಹರಿಸಬೇಕೆಂಬ ಅಭಿಪ್ರಾಯ ಹೇಳಿದ್ದಾರೆ. ಅಲ್ಲದೇ ನಮ್ಮ ಭಾಗದ ಮಣ್ಣಿನ ಗುಣವೇ ಬೇರೆ ಆಗಿರುವುದರಿಂದ ನಮಗೆ ತಕ್ಷಣ ನೀರು ಬೇಕಾಗಿಲ್ಲ. ಆದರೆ ಭದ್ರಾವತಿ ಭಾಗದ ತೋಟ, ಗದ್ದೆಗಳಿಗೆ ಅನುಕೂಲವಾಗಲು 1 ಸಾವಿರ ಕ್ಯೂಸೆಕ್ಸ್ ನೀರನ್ನು ನೀವು ಹರಿಸಿಕೊಳ್ಳಿ. ನಮಗೆ ಜ. 5ರ ನಂತರ 2800 ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡಿ ಎಂಬ ಸಲಹೆ ನೀಡಿದರು.

ಇದನ್ನು ಒಪ್ಪಿಕೊಂಡ ಹೆಚ್.ಆರ್. ಬಸವ ರಾಜಪ್ಪ ಅವರು, ಡಿಸೆಂಬರ್ 30ರಿಂದ ನಾಲೆಗೆ 1 ಸಾವಿರ ಕ್ಯೂಸೆಕ್ಸ್ ನೀರು ಹರಿಸಿ, ಕಾಲುವೆಯ ಸಬ್ ಗೇಟ್ ಬಳಿ ಮರಳಿನ ಚೀಲಗಳನ್ನು ಹಾಕಿ ನಮಗೆ ಕೊಡಿ ಎಂದು ಭದ್ರಾವತಿ ವಿಭಾಗದ ಇಂಜಿನಿಯರ್‌ಗಳಿಗೆ ಸೂಚಿಸಿದರು.

ಅಂತಿಮವಾಗಿ ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರು ಎಲ್ಲರ ಅಭಿಪ್ರಾಯ ಆಧರಿಸಿ, ನಾಳೆ ದಿನಾಂಕ 29 ರಿಂದ ಎಡದಂಡೆ ನಾಲೆಗೆ ಮತ್ತು ನಾಡಿದ್ದು ದಿನಾಂಕ 30ರಿಂದ ಬಲದಂಡೆ ನಾಲೆಗೆ ಸತತವಾಗಿ 120 ದಿನ ನೀರು ಹರಿಸುವ ನಿರ್ಧಾರ ಪ್ರಕಟಿಸಿದರು.

## ನೀರಾವರಿ ಕಛೇರಿ ಸ್ಥಳಾಂತರ ಮಾಡದಂತೆ ಒತ್ತಾಯ

ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಮಲೇಬೆನ್ನೂರಿನಲ್ಲಿರುವ ಭದ್ರಾ ನಾಲಾ ನಂ. 3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಅವರ ಕಛೇರಿಯನ್ನು ಹೊನ್ನಾಳಿಗೆ ಸ್ಥಳಾಂತರಿಸುವ ಪ್ರಯತ್ನ ನಡೆಸಿದ್ದಾರೆ. ಇದಕ್ಕೆ ಸರ್ಕಾರ ಅವಕಾಶ ನೀಡಬಾರದೆಂದು ಕಾಡಾ ಸಭೆ ನಿರ್ಣಯ ಕೈಗೊಳ್ಳಬೇಕೆಂದು ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ ಒತ್ತಾಯಿಸಿದರು.

ಆ ಕಛೇರಿಯನ್ನು ಸ್ಥಳಾಂತರ ಮಾಡಿದರೆ ಕೊನೆ ಭಾಗದ ರೈತರಿಗೆ ವಿಷ ಕೊಟ್ಟಂತೆ ಆಗುತ್ತದೆ ಎಂದು ಎಚ್ಚರಿಸಿದರು.

ಜೊತೆಗೆ ತ್ಯಾವಣಿಗೆ, ಬಸವಾಪಟ್ಟಣ ಎಇಇ ಕಛೇರಿಗಳನ್ನು ಸಾಸ್ವೆಹಳ್ಳಿ ಕಛೇರಿಯಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯನ್ನು ಕೈ ಬಿಡುವಂತೆ ತೇಜಸ್ವಿ ಪಟೇಲ್ ಒತ್ತಾಯಿಸಿದಾಗ ಭದ್ರಾ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಬೆಂಬಲ ನೀಡಿದರು. ಯಾವುದೇ ಕಛೇರಿ ಸ್ಥಳಾಂತರ ಅಥವಾ ವಿಲೀನ ಗೊಳಿಸಲು ನಾನು ಬಿಡುವುದಿಲ್ಲ. ಇದರಿಂದ ಕೊನೆ ಭಾಗದ ರೈತರಿಗೆ ತೊಂದರೆಯಾಗುತ್ತದೆ ಎಂಬ ವಿಷಯವನ್ನು ನೀರಾವರಿ ಇಲಾಖೆ ಗಮನಕ್ಕೆ ತರುತ್ತೇನೆಂದರು.

ಬೇಸಿಗೆ ಸಮಯ ಆಗಿರುವುದರಿಂದ ಇಂಜಿನಿಯರ್‌ಗಳು ನಿರ್ಲಕ್ಷ್ಯ ಮಾಡದೇ ಜವಾಬ್ದಾರಿಯಿಂದ ಹಗಲು, ರಾತ್ರಿ ಎನ್ನದೇ ಕೆಲಸ ಮಾಡಬೇಕು. ಯಾರೇ ಫೋನ್ ಮಾಡಿದರೂ ಎತ್ತಿ ಮಾತನಾಡಿ, ಇಲ್ಲದಿದ್ದರೆ ಶಿಸ್ತು ಕ್ರಮ ಕೈಗೊಳ್ಳುತ್ತೇವೆ ಎಂಬ ಎಚ್ಚರಿಕೆ ನೀಡಿದರು.

ಅಪ್ಪರ್ ಭದ್ರಾ ಕಾಲುವೆ ಮೂಲಕ ವಾಣಿ ವಿಲಾಸ ಸಾಗರಕ್ಕೆ ಮಳೆಗಾಲದಲ್ಲಿ ನಿತ್ಯ ನೀರು ಹರಿಸಿ ಆ ಜಲಾಶಯವನ್ನು ತುಂಬಿಸಿದ್ದೇವೆ ಎಂದು ಪವಿತ್ರ ರಾಮಯ್ಯ ತಿಳಿಸಿದರು.

ಭದ್ರಾ ಕಾಡಾ ಪ್ರಭಾರ ಆಡಳಿತಾಧಿಕಾರಿ ಅರುಣ್, ಕಾಡಾ ಸದಸ್ಯರಾದ ಕೆ.ಎಸ್. ರುದ್ರಮೂರ್ತಿ, ತರೀಕೆರೆಯ ವಿನಾಯಕ, ಸದಾಶಿವಪ್ಪಗೌಡ್ರು, ಹರಿಹರ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ವಾಸನದ ಬಿ.ಎಸ್. ಮಂಜುನಾಥ್, ಸಂಕ್ಲೀಪುರದ ಸಿ. ನಾಗೇಂದ್ರಪ್ಪ, ಚಂದ್ರಶೇಖರಪ್ಪ, ದೇವರಬೆಳಕೆರೆಯ ಗೋವಿಂದರೆಡ್ಡಿ, ಗುಳದಹಳ್ಳಿಯ ಕುಬೇರಪ್ಪ, ಪ್ರಕಾಶ್, ನಾಗರಾಜ್, ಭದ್ರಾವತಿ ವಿಭಾಗದ ಇಇ ರವಿಚಂದ್ರ, ದಾವಣಗೆರೆ ವಿಭಾಗದ ಇಇ ಮಲ್ಲಪ್ಪ, ಮಲೇಬೆನ್ನೂರು ವಿಭಾಗದ ಇಇ ಚಿದಂಬರ್ ಲಾಲ್, ಬಸವಾಪಟ್ಟಣ ಎಇಇ ದೊಡ್ಡಪ್ಪ, ಸಾಸ್ವೆಹಳ್ಳಿ ಎಇಇ ರಾಜೇಂದ್ರ ಪ್ರಸಾದ್, ದಾವಣಗೆರೆ ಎಇಇ ಬಸವರಾಜ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.

# ಇಂಜಿನಿಯರಿಂಗ್ ಪ್ರವೇಶ ಶುಲ್ಕ ಏರಿಕೆಗೆ ಖಂಡನೆ



ದಾವಣಗೆರೆ, ಡಿ.28- ಸರ್ಕಾರಿ ಕೋಟಾದಡಿಯಲ್ಲಿ ಇಂಜಿನಿಯರಿಂಗ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಶುಲ್ಕ ಏರಿಕೆ ಖಂಡಿಸಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಜಿಲ್ಲಾ ಘಟಕದ ನೇತೃತ್ವದಲ್ಲಿ ನಗರದ ಗ್ರಾಮಾಂತರ ಪೊಲೀಸ್ ಠಾಣೆ ವೃತ್ತದಲ್ಲಿ ಇಂದು ಡಿಪ್ಲೋಮಾ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಕೋವಿಡ್ ಹಿನ್ನೆಲೆಯಲ್ಲಿ ಖಾಸಗಿ ಕಾಲೇಜುಗಳ ಇಂಜಿನಿಯರಿಂಗ್ ಕೋರ್ಸ್‌ನ ಶುಲ್ಕದಲ್ಲಿ ಯಾವುದೇ ಹೆಚ್ಚಳ ಮಾಡದೆ, ಹಿಂದಿನ ವರ್ಷದ ಶುಲ್ಕವನ್ನೇ ಮುಂದುವರೆಸಲು ತೀರ್ಮಾನಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್ ಅವರು ಇತ್ತೀಚಿಗೆ ಹೇಳಿಕೆ ಕೊಟ್ಟಿದ್ದರು.

ಆದರೆ, ಈಗ ಸರ್ಕಾರ ಕೆಲವು ಪರೋಕ್ಷ ಕ್ರಮಗಳ ಮೂಲಕ ಶುಲ್ಕ ಹೆಚ್ಚಳಕ್ಕೆ ದಾರಿ ಮಾಡಿಕೊಡುವ ಆದೇಶವನ್ನು ಹೊರಡಿಸಿದೆ. ಇದರಿಂದಾಗಿ ಇಂಜಿನಿಯರಿಂಗ್ ಓದುವ ಕನಸು ಕಂಡಿರುವ ರಾಜ್ಯದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳ ಕನಸು ಕನಸಾಗಿಯೇ ಉಳಿಯುವಂತಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದ ಸರ್ಕಾರಿ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳಲ್ಲಿನ ಸರ್ಕಾರಿ ಕೋಟಾದ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ

## ಡಿಪ್ಲೋಮಾ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ

ಪಡೆಯುವ ವಿದ್ಯಾರ್ಥಿಗಳಿಗೆ ಹಿಂದಿನ ವರ್ಷ ಈ ಶುಲ್ಕವು 58,806 ರೂ. ಹಾಗೂ 65,340 ರೂ. (ವಿಶ್ವವಿದ್ಯಾಲಯ ಶುಲ್ಕವನ್ನು ಒಳಗೊಂಡಂತೆ) ನಿಗದಿಪಡಿಸಲಾಗಿತ್ತು. ಆದರೆ ಪ್ರಸಕ್ತ ಸಾಲಿನಿಂದ 83,526 ರೂ. ಹಾಗೂ 90,060 ರೂ ಗಳಿಗೆ ನಿಗದಿಪಡಿಸಲಾಗಿದೆ ಎಂದು ಆಕ್ಷೇಪಿಸಿದರು.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಶುಲ್ಕಗಳಿಗೂ ಹಾಗೂ ಸರ್ಕಾರಿ ಅನುದಾನಿತ ಇಂಜಿನಿಯರಿಂಗ್ ಕಾಲೇಜಿನ ಶುಲ್ಕಗಳಿಗೂ 40 ಸಾವಿರ ರೂ.ಗಳವರೆಗೆ ಹೆಚ್ಚಳ ಮಾಡಲಾಗಿದೆ. ಸರ್ಕಾರ ತಕ್ಷಣವೇ ಸಿಇಟಿ ಕೌನ್ಸಿಲಿಂಗ್‌ನಲ್ಲಿ ಭಾಗಿಯಾದವರಿಗೆ ಮೆಡಿಕಲ್ ನಲ್ಲೂ ಅವಕಾಶ ನೀಡಬೇಕು. ಇಂಜಿನಿಯರಿಂಗ್ ಸೀಟು ರದ್ದಾದರೆ ವಿದ್ಯಾರ್ಥಿಗಳ ಶುಲ್ಕ ಮೆಡಿಕಲ್ ಗೆ ವರ್ಗಾವಣೆ ಆಗುವಂತೆ ಕ್ರಮ ತೆಗೆದುಕೊಳ್ಳಬೇಕು. ಶುಲ್ಕ ಹೆಚ್ಚಳಕ್ಕೆ ಹೊರಡಿಸಿರುವ ಆದೇಶವನ್ನು ತಕ್ಷಣಕ್ಕೆ ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಚಾಲಕ ಶರತ್, ಕಾರ್ಯಕರ್ತರಾದ ಮನೋಜ್, ವೀರೇಶ್, ರಾಜು, ಪೃಥ್ವಿ ಮತ್ತು ಕಾಲೇಜು ವಿದ್ಯಾರ್ಥಿಗಳಾದ ರಮೇಶ್, ಕಾರ್ತಿಕ್, ರಮ್ಯ, ದೀಪಿಕಾ, ಜ್ಯೋತಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸರ್ವ ಸದಸ್ಯರ ಸಭೆ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸರ್ವ ಸದಸ್ಯರ ಆನ್‌ಲೈನ್ ಸಭೆ ಇಂದು ನಡೆಯಲಿದೆ. ಬೆಳಿಗ್ಗೆ 11 ಗಂಟೆಗೆ ಭಾರತ ಸೇವಾದಳ ಸಭಾಂಗಣದಲ್ಲಿ ಜಿಲ್ಲಾ ಕಮಿಟಿ ಆನ್‌ಲೈನ್‌ನಲ್ಲಿ ಭಾಗವಹಿಸುವುದಕ್ಕೆ ಅನುಕೂಲ ಮಾಡಿದ್ದು, Join Zoom Meeting https://us02webzoomus/j/83487937311?pwd=N2dPeTY2M0tBTHdKajVYMUkwME9JQT09 Meeting ID: 834 8793 7311 Passcode: 330118 ಈ ಲಿಂಕ್ ಮೂಲಕ ಭಾಗವಹಿಸಬಹುದಾಗಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

# ಬ್ಯಾಂಕಿಂಗ್ ಹುದ್ದೆ ನೇಮಕಾತಿ : ಶಿಬಿರ

ದಾವಣಗೆರೆ, ಡಿ.28- ಐಬಿಪಿಎಸ್ ರಾಷ್ಟ್ರೀಕೃತ ಬ್ಯಾಂಕ್‌ನವರು ಮುಂದಿನ ದಿನಗಳಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಅಧಿಕಾರಿಗಳ ಹಾಗೂ ಗುಮಾಸ್ತರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ, ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ 45 ದಿನಗಳ ತರಬೇತಿ ನಡೆಯಲಿದೆ.

ಆಸಕ್ತರು ಬರುವ ಜನವರಿ 5 ರೊಳಗಾಗಿ ದೂರವಾಣಿ 0821-2515944 ನ್ನು ಸಂಪರ್ಕಿಸಿ ಹೆಸರು ನೊಂದಾಯಿಸಬಹುದು ಎಂದು ಕರಾಮುವಿ ಕುಲಸಚಿವರು ತಿಳಿಸಿದ್ದಾರೆ.

# ನಿರಾಶ್ರಿತರಿಗೆ ಅರ್ಜಿ

ದಾವಣಗೆರೆ, ಡಿ. 28 - ವನಿತಾ ಸಮಾಜದ ಅಂಗ ಸಂಸ್ಥೆ 'ಆಶ್ರಯ' ಹಿರಿಯ ವನಿತೆಯರ ಆನಂದಧಾಮಕ್ಕೆ ನಿರಾಶ್ರಿತ ಮಹಿಳೆಯರು ದಾಖಲಾಗಬಹುದು. 60 ವರ್ಷಕ್ಕೆ ಮೇಲ್ಪಟ್ಟ ತಕ್ಕಮಟ್ಟಿಗೆ ಆರೋಗ್ಯವಾಗಿರುವ ಮಹಿಳೆಯರು ಸಂಪರ್ಕಿಸಿ: 94806 87273, 98448 50414, 98451 66724.


## ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಮಹಾನಗರ ಪಾಲಿಕೆಯ ಕರ್ನಾಟಕ ರಾಜ್ಯೋತ್ಸವ ಗೌರವ ಪುರಸ್ಕಾರಕ್ಕೆ ಭಾಜನರಾಗಿರುವ ಸಾಮಾಜಿಕ ಸೇವಾ ಕಾರ್ಯಕರ್ತರೂ, ಯೋಗಪಟುಗಳೂ, ನಮ್ಮ ಆತ್ಮೀಯರೂ ಆದ

**ಶ್ರೀ ಬಾದಾಮಿ ಜಯಣ್ಣ**

ಅವರಿಗೆ ಅಭಿನಂದನೆಗಳು

**ಎಲ್ ದಯಾನಂದ**, ಹಿರಿಯ ವಕೀಲರು. **ಹೆಚ್.ಆರ್. ಸಾಂಬಶಿವಯ್ಯ**. ಮಾಲೀಕರು ಸ್ವಾಮಿ ಬಾರ್. **ಪಾಲಾಕ್ಷ ಇಂಗಳಗಿ**, ದಾರ ಆಯಿಲ್ ಡಿಸ್ಟ್ರಿಬ್ಯೂಟರ್ಸ್. **ಎಂ. ಬಿ. ಕೊಟ್ರೇಶ್**, ಬಾಪೂಜಿ ಬ್ಯಾಂಕ್. **ಬಿ ಎಸ್ ಮಂಜುನಾಥ್**, ಬಾಪೂಜಿ ಬ್ಯಾಂಕ್. **ಪ್ರೊ: ಎಂ ಹೆಚ್. ಪ್ರಸನ್ನ ರೆಡ್ಡಿ**, ಉಪನ್ಯಾಸಕರು. **ಪಿ ಡಿ. ಚಿದಾನಂದ**, ಕಿಶನ್ ಟೆಕ್ಸ್‌ಟೈಲ್, **ಹೆಚ್. ಬಿ ಜಯಣ್ಣ**, ಎಸ್.ಬಿ.ಐ. ಮ್ಯಾನೇಜರ್. **ಪಿ.ಆರ್. ಪ್ರಭಾಕರ್** ಎಸ್.ಬಿ.ಐ. ಮ್ಯಾನೇಜರ್. **ಕೊಟ್ರೇಶ್ ಎನ್. ಕೆ.**, ವೀಡಾಲ್ ಆಯಿಲ್ ಡಿಸ್ಟ್ರಿಬ್ಯೂಟರ್ಸ್ **ಎಂ.ಜಿ. ರಮೇಶ್**. ವಕೀಲರು. **ಎ.ಸಿ. ರಾಘವೇಂದ್ರ**, ವಕೀಲರು, **ಹೆಚ್. ದಿವಾಕರ್**, ವಕೀಲರು. **ಪ್ರಭು ಸ್ವಾಮಿ**. ಎಲೆಕ್ಟ್ರಿಕಲ್ ಕಂಟ್ರ್ಯಾಕ್ಟ್. **ಶಾಮ್ ಪ್ರಕಾಶ್**. ಇಂಟೀರಿಯರ್. **ಶ್ರೀನಿವಾಸ್**. ಟೈಲ್ಸ್ ವರ್ತಕರು, **ಓ.ಆರ್. ಶಿವಕುಮಾರ್**, ಟೈಲ್ಸ್ ವರ್ತಕರು, **ಮಹೇಶ್ ದಳವಾಯಿ**, ಸ್ಯಾಂಡ್ ವರ್ತಕರು **ರಾಜಣ್ಣ ತರಗಾರ್** ಮೇಸ್ತ್ರಿ, **ಸಲೀಂ**, ಟೈಲ್ಸ್ ಮೇಸ್ತ್ರಿ, **ಟೈಲ್ಸ್ ಪ್ರಕಾಶ್**, **ರವಿ** ರವಿ ಮೆಡಿಕಲ್, **ರುದ್ರಣ್ಣ** ಸಿಮೆಂಟ್ ವ್ಯಾಪಾರಿ **ಕಾಮನಬಿಲ್ಲು ಗ್ರೂಪ್**, ದಾವಣಗೆರೆ **ಫಾರ್ಚ್ಯೂನ್ ಗ್ರೂಪ್**, ದಾವಣಗೆರೆ **ಎಲ್.ಡಿ. ಗ್ರೂಪ್**, ದಾವಣಗೆರೆ **ಮನೋರಂಜನ್ ಗ್ರೂಪ್**, ದಾವಣಗೆರೆ

## ಶಬರಿಗಿರಿ ರಿಯಲ್ ಎಸ್ಟೇಟ್

ದಾವಣಗೆರೆಯ GMIT ಮುಂದೆ ಪಿಬಿ ರೋಡಿಗೆ 120×160 ಅಡಿ ನಿವೇಶನ ಮಾರಾಟಕ್ಕಿದೆ ಹಾಗೂ ನೂತನ ಕಾಲೇಜ್ ರೋಡ್‌ಗೆ 70×100 ಕಮರ್ಷಿಯಲ್ ಸೈಟ್ ಮತ್ತು 80×85 ಕಮರ್ಷಿಯಲ್ ಸೈಟ್‌ಗಳು ಮಾರಾಟಕ್ಕಿವೆ. ಬೆಂಗಳೂರು ಶೇಷಾದ್ರಿಪುರಂನಲ್ಲಿ ಅಪಾರ್ಟ್‌ಮೆಂಟ್ ಒಂದರಲ್ಲಿ 2-BHK ಫ್ಲಾಟ್ ಮಾರಾಟಕ್ಕಿದೆ.

ಆಸಕ್ತರು ಸಂಪರ್ಕಿಸಿ : **ಶಬರಿಗಿರಿ ರಿಯಲ್ ಎಸ್ಟೇಟ್**

**PH.NO - 89714 99575**

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ **ಶ್ರೀ ಬಸಂತ ಕುಮಾರ್ ಪಿ. ಬಿನ್ ಪಂಚಾಕ್ಷರಪ್ಪ ಜಿ.ಎಸ್.** ವಯಸ್ಸು 42 ವರ್ಷ, ನಂ.841, ಹೊಂಡದ ಸರ್ಕಲ್, ದೊಡ್ಡಪೇಟೆ, ದಾವಣಗೆರೆ ಇವರು 1ನೇ ಪಾರ್ಟಿಯಾಗಿದ್ದು, **ಶ್ರೀಮತಿ ನೇತ್ರಾವತಿ ಕೋಂ ಶ್ರೀ ವೆಂಕಟಾಚಲಪತಿ ಶೆಟ್ಟಿ** ನಂ.724, 4ನೇ ಮೇನ್, ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ-04 ಇವರು 2ನೇ ಪಾರ್ಟಿಯಾಗಿದ್ದು, ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವು ದೇನೆಂದರೆ ಈ ಕೆಳಕಾಣಿಸಿದ ಷೆಡ್ಯೂಲ್ ಸ್ವತ್ತಿನ ಮಾಲೀಕರು 2ನೇ ಪಾರ್ಟಿಯಾಗಿದ್ದು, 1ನೇ ಪಾರ್ಟಿಯವರು ಸದರಿ ಸ್ವತ್ತನ್ನು ಖರೀದಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಉಭಯತರ ಖರೀದಿ ಒಪ್ಪಂದದ ಪತ್ರ ಮಾಡಿಕೊಂಡಿದ್ದು, ದಾವಣಗೆರೆ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ 2ನೇ ಪಾರ್ಟಿಯವರಿಂದ 1ನೇ ಪಾರ್ಟಿಯವರು ಖರೀದಿ ಪತ್ರ (ಸೇಲ್ ಡೀಡ್) ನೊಂದಣಿ ಮಾಡಿಕೊಳ್ಳುವವರಿದ್ದು, ಕಾರಣ ಸದರಿ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಬಗ್ಗೆ ಯಾರಾದರೂ ತಂಟೆ ತಕರಾರುಗಳಿದ್ದಲ್ಲಿ **ಈ ಪ್ರಕಟಣೆ ಪ್ರಕಟಣೆಗೊಂಡ ದಿನಾಂಕದಿಂದ 07 ದಿವಸದೊಳಗಾಗಿ ಈ ಕಾಣಿಸಿದವರಲ್ಲಿ ಸಂಪರ್ಕಿಸಿ ತಂಟೆ ತಕರಾರು ಸಲ್ಲಿಸಬಹುದು**. ತಪ್ಪಿದ್ದಲ್ಲಿ ಸೇಲ್ ಡೀಡ್ ನೊಂದಣಿಯಾದ ನಂತರ ಬಂದ ತಂಟೆ ತಕರಾರುಗಳಿಗೆ ಮತ್ತು ಇದರಿಂದಾಗುವ ನಷ್ಟಕ್ಕೆ 1ನೇ ಪಾರ್ಟಿಯವರು ಹೊಣೆಗಾರರಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್:** ದಾವಣಗೆರೆ ಸಿಟಿ ನಗರಾಭಿವೃದ್ಧಿ ಪ್ರಾಧಿಕಾರದವರು ಅಭಿವೃದ್ಧಿ ಪಡಿಸಿ ನಿರ್ಮಿಸಿರುವ ಶ್ರೀ ದೇವರಾಜ್ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಿವೇಶನ ಇದರ ಸಂಖ್ಯೆ ಅ-2(2) ಅಳತೆ ಪೂರ್ವ-ಪಶ್ಚಿಮ 40 ಅಡಿ, **ಉತ್ತರ-ದಕ್ಷಿಣ:** 30ಅಡಿ ನಿವೇಶನ ಇದರ **ಚೆಕ್ಕುಬಂದಿ: ಪೂರ್ವಕ್ಕೆ:** ಸಿ-2(1), **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ಸೈಟ್ ನಂ.144 ಈ ಮದ್ಯದ ಸ್ವತ್ತು.

ಡಿ.ಎನ್.ಸಂಗಪ್ಪ (ವಕೀಲರು) ಮೊ:8217342323

ಬಸಂತ ಕುಮಾರ್.ಪಿ. ಮೊ: 8880786777

## ಮುಸ್ಲಿಂ ಎಜುಕೇಷನ್ ಫಂಡ್ ಅಸೋಸಿಯೇಷನ್ (ರಿ.)

**ಮುಸ್ಲಿಂ ಹಾಸ್ಟೆಲ್, ಶ್ರೀ ಮಿರ್ಜಾ ಇಸ್ಮಾಯಿಲ್ ರೋಡ್ ಪಿ.ಜೆ. ಬಡಾವಣೆ, ದಾವಣಗೆರೆ-577 002.**


**2019-2020 ಮತ್ತು 2020-2021ರ ಸರ್ವ ಸದಸ್ಯರ ನವೀಕರಣ ಪ್ರಕಟಣೆ**

ಮುಸ್ಲಿಂ ಎಜುಕೇಷನ್ ಫಂಡ್ ಅಸೋಸಿಯೇಷನ್ (ಮುಸ್ಲಿಂ ಹಾಸ್ಟೆಲ್) ಸರ್ ಮಿರ್ಜಾ ರಸ್ತೆ, ದಾವಣಗೆರೆಯ ಸರ್ವ ಸದಸ್ಯರ ನವೀಕರಣ ಈ ಮೊದಲು ಪತ್ರಿಕೆ ಪ್ರಕಟಣೆ ಮೂಲಕ 27.12.2021ರಂದು ಕೊನೆಯ ದಿನಾಂಕ ಆಗಿತ್ತು, ಆದರೆ ಆಡಳಿತ ಮಂಡಳಿಯ ನಿರ್ಧಾರದಂತೆ ಸರ್ವ ಸದಸ್ಯರ ನವೀಕರಣ ಪ್ರಕ್ರಿಯೆಯನ್ನು ದಿನಾಂಕ : 10.01.2022 ರ ತನಕ ವಿಸ್ತರಿಸಲಾಗಿದ್ದು, ಆಸಕ್ತ ಸದಸ್ಯರು ತಮ್ಮ ಸದಸ್ಯರ ಸದಸ್ಯತ್ವವನ್ನು ನವೀಕರಣಗೊಳಿಸಬೇಕೆಂದು ಸರ್ವ ಸದಸ್ಯರಲ್ಲಿ ಕೋರಲಾಗಿದೆ.

**ಸಹಿ/-ಅಧ್ಯಕ್ಷರು**
**ಮುಸ್ಲಿಂ ಎಜುಕೇಷನ್ ಫಂಡ್ ಅಸೋಸಿಯೇಷನ್ (ರಿ.)**
**ಮುಸ್ಲಿಂ ಹಾಸ್ಟೆಲ್, ದಾವಣಗೆರೆ.**

## ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ

**Numero Astrologer & Palmistry**



ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: **ಪಂ. ಅರುಣ್ ಕುಮಾರ್ ಆಚಾರ್ಯ**
ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ
ಮೊಬೈಲ್ : **94481 78626, 96068 18273**


ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ

## ವಾಸವಿ ಯುವಜನ ಸಂಘ (ರಿ)

ಎಸ್.ಕೆ.ಪಿ. ರಸ್ತೆ, ದಾವಣಗೆರೆ

**ಜನ್ಮದಿನದ ಶುಭಾಶಯಗಳು**





**ಡಾ|| ಬಿ.ಎನ್. ಅಭಿಷೇಕ್**
ನಿರ್ದೇಶಕರು
ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಕ್ರೀಡಾ ಹಾಗೂ ಆರೋಗ್ಯ ವಿಭಾಗ

ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.

**ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.**

ವಾಹನ ಚಲಾಯಿಸುವಾಗ ಹೆಲ್ಮೆಟ್ ಕಡ್ಡಾಯವಾಗಿ ಧರಿಸಿ

